TEXT PROBLEM WITHIN THE BOOK ONLY

UNIVERSAL LIBRARY

OU_198452

UNIVERSAL LIBRARY

ಜಯಂತಿ ಪ್ರಚಾರಮಾಲೆ

೧

# ಕರ್ನಾಟಕ ಏಕೀಕರಣ

'ಚಾಡಿಯ ಚಾಣಕ್ಯ'

ಯಂತಿ ಪ್ರಕಾಶನ ಸಮಿತಿ
ಧಾರವಾಡ

●

ಬೆಲೆ : ನಾಲ್ಕಾಣೆ

# ಮೊದಲ ಮಾತು

ಪ್ರಸ್ತುತ ಲೇಖಕನು ತಜ್ಞನಲ್ಲ, ಆದರೆ ಪೂರ್ತಿಯಾಗಿ ಅಜ್ಞನೂ ಅಲ್ಲ; ತನ್ನ ಹಿತ ಯಾವುದು ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳುವ ಮತ್ತು ಅಷ್ಟೆ ಚೆನ್ನಾಗಿ ಅನ್ಯರಿಗೆ ತಿಳುಹಿಸಬಲ್ಲ ಯೋಗ್ಯತೆಯು ಸಾಮಾನ್ಯ ಕನ್ನಡಿಗನಾಗಿದ್ದಾನೆ. ಈ ಚಿಕ್ಕ ಹೊತ್ತಗೆಯಲ್ಲಿ ಏಕೀಕರಣದ ವಿಷಯವಾಗಿ ಸರ್ವಸಾಮಾನ್ಯನಿಗೂ ತಿಳಿಯುವಂತೆ ಶೈಲಿ ಇದೆ. ದುಂಡುಮೇಜಿನ ಪರಿಷತ್ತಿನ ಕಾಲಕ್ಕೆ ಸಿಂಧಪ್ರಾಂತ ನಿರ್ಮಾಣದ ಉಪಸಮಿತಿಯ ವಿವರಗಳು, ಅದೇ ಕಾಲಕ್ಕೆ ಶ್ರೀ. ಬಿ. ಶಿವರಾಯರು ಏಕೀಕರಣದ ಬಗ್ಗೆ ಒಪ್ಪಿಸಿದ ಮನವಿ ಮತ್ತು ಶ್ರೀ. ಪಿ. ಚಂದ್ರಶೇಖರ ಹೆಗ್ಡೆ ಅವರು (ಮಾರ್ಚ್ ೧೯೩೯ರಲ್ಲಿ) ಪ್ರಕಟಿಸಿದ 'ಕರ್ನಾಟಕದ ದಿಗ್ದರ್ಶನ,' 'Whither Karnataka?' ಎಂಬ ಹೊತ್ತಗೆ—ಈ ಮೂರರ ಅಭ್ಯಾಸದ ತಳಹದಿಯ ಮೇಲೆ ಸದ್ಯದ ಚಿಕ್ಕ ಹೊತ್ತಗೆ ನಿಂತಿದೆ. ಆದರೆ ಇಲ್ಲಿ ಕಂಡುಬರುವ ವಿಚಾರಸರಣಿಗೆ ಮಾತ್ರ ಲೇಖಕನು ಯಾರಿಗೂ ಋಣಿಯಾಗಬೇಕಾಗಿಲ್ಲ. ಸದ್ಯದ ಕಾಲದಲ್ಲಿ ಈ ಚಿಕ್ಕ ಹೊತ್ತಗೆಯು ಕನ್ನಡಿಗರನ್ನು ಕೆಣಕಿದರೆ ಸಾಕು, ಲೇಖಕನು ಕೃತಾರ್ಥನಾಗುವನು.

'ಚಾ. ಚಾ.'

# ಕರ್ನಾಟಕ ಏಕೀಕರಣ

●

## ಏಕೀಕರಣವು ಇಂದಿನ ರಾಜಕೀಯ ತತ್ತ್ವ

೧೯೧೪ರ ಯುದ್ಧವನ್ನು ಕಂಡವರು ಅನೇಕರಿದ್ದಾರೆ; ಆ ಯುದ್ಧವನ್ನು ಮರೆಯುವವರು ಯಾರೂ ಇರಲಿಕ್ಕಿಲ್ಲ. ಆ ಯುದ್ಧದಲ್ಲಿ ಅಡಕವಾದ ರಾಜಕೀಯ ತತ್ತ್ವವನ್ನು ತರುವಾಯದ ಘಟನೆಗಳಿಂದ ಒಂದು ವೇಳೆ ಯಾರಾದರೂ ಮರೆತಿದ್ದರೆ, ಸದ್ಯಕ್ಕೆ ನಡೆದ ಯುದ್ಧವು ಅವರ ಸ್ಮೃತಿಯನ್ನು ಹೊಡೆದೆಬ್ಬಿಸುವುದು. ಮುವ್ವತ್ತು ವರ್ಷಗಳ ಹಿಂದೆ ಜರ್ಮನ್ ಸೇನೆಯು ಬೆಲ್ಜಿಯಂದಲ್ಲಿ ಕಾಲಿಟ್ಟೊಡನೆ ಇಂಗ್ಲಂಡ್-ಫ್ರಾನ್ಸುಗಳು ಸಿಡಿದೆದ್ದುವು. ಯಾಕೆ? ರಾಜಕಾರಣದ ರಂಗದಲ್ಲಿ ಸ್ವಾತಂತ್ರ್ಯದ ಮತ್ತು ಸ್ವಯಂ ನಿರ್ಣಯದ ತತ್ತ್ವಗಳ ಸಂರಕ್ಷಣೆಗಾಗಿ. ರಾಷ್ಟ್ರವು ಚಿಕ್ಕದಿರಲಿ ದೊಡ್ಡದಿರಲಿ, ತನ್ನ ಜೀವನವನ್ನು ನಡೆಯಿಸುವ ಮತ್ತು ತನ್ನ ಭವಿತವ್ಯತೆಯನ್ನು ನಿರ್ಣಯಿಸುವ ಹಕ್ಕು-ಸ್ವಾತಂತ್ರ್ಯಗಳು ಅದಕ್ಕಿವೆ. ಒಂದು ದೇಶ, ಒಂದು ಜನಾಂಗ, ಒಂದು ಸಂಪ್ರದಾಯ ಇವುಗಳ ಮೇಲೆ ಇನ್ನೊಂದರ ಬಲವಂತಿಕೆ ಇರಕೂಡದು. ವಿಶ್ವದ ಶಾಂತಿಗಾಗಿ ವಿಶ್ವದ ಘಟಕಗಳಾದ ರಾಷ್ಟ್ರಗಳಿಗೆ ಸ್ವಯಂ ನಿರ್ಣಯದ ಹಕ್ಕು ಅಗತ್ಯವಿದೆ. ಇದೇ ಮಾತನ್ನು ಅನ್ವಯಿಸುವುದಾದರೆ— ಈ ಮಾತು

ನಿಜವಾದ ತತ್ತ್ವವಾಗಿದ್ದರೆ ಅವರ ಅನ್ವಯವಾಗಲೇಬೇಕು—ಇಂದು ತನ್ನದೆ ಇತಿಹಾಸ, ತನ್ನದೆ ಸಂಪ್ರದಾಯ, ತನ್ನದೆ ಸಂಸ್ಕೃತಿ ಉಳ್ಳ ಕರ್ನಾಟಕಕ್ಕೂ ಸ್ವಯಂ ನಿರ್ಣಯದ ಅಧಿಕಾರ ಬೇಕಲ್ಲವೆ? ಭಾರತದ ಶಾಂತಿ-ಪೋಷಣಗಳಿಗಾಗಿ, ಕರ್ನಾಟಕಕ್ಕೆ ತನ್ನ ಜೀವನವನ್ನು ತಾನು ನಡೆಯಿಸುವ ಅಧಿಕಾರ ಬೇಕಲ್ಲವೆ?

## ಏಕೀಕರಣದಿಂದ ರಾಷ್ಟ್ರೀಕರಣಕ್ಕೆ ಹಾನಿ ಇಲ್ಲ!

ಕರ್ನಾಟಕವು ಬೆಲ್ಜಿಯಂದಂತೆ ಒಂದು ಸ್ವತಂತ್ರ ರಾಷ್ಟ್ರವಲ್ಲ, ಭಾರತದ ಒಂದು ಅಂಗ, ಇಂದು ಭಾರತವನ್ನೆ ಒಂದಾಗಿ ರಾಷ್ಟ್ರೀಕರಿಸುವಾಗ ಕರ್ನಾಟಕ ಏಕೀಕರಣವು ಅನಾವಶ್ಯಕ,ಅಪಾಯಕಾರಕ—ಎಂದು ಮುಂತಾಗಿ ಕೆಲವರು ವಾದಿಸಬಹುದಾಗಿದೆ. ಆದರೆ ಆ ವಾದದಲ್ಲಿ ಅಜ್ಞಾನವೆ ಹೆಚ್ಚು ಎಂದು ಹೇಳಬೇಕಾಗುವುದು. ಮಹಾರಾಷ್ಟ್ರ, ಬಂಗಾಲ, ಪಂಜಾಬ, ಸಂಯುಕ್ತಪ್ರಾಂತ ಮೊದಲಾದುವುಗಳೊಡನೆ ಕರ್ನಾಟಕವನ್ನು ಹೋಲಿಸಿ ನೋಡಿದರೆ, ಭಾರತದ ರಾಷ್ಟ್ರೀಕರಣದಲ್ಲಿ ವಿಚ್ಛಿನ್ನ ಕರ್ನಾಟಕವು ಹೇಗೆ ಹಿಂದುಳಿದಿದೆ ಎಂಬುದು ಸ್ಪಷ್ಟವಾಗುವುದು. ಅಖಂಡ ಭಾರತದ ರಾಜಕಾರಣದಲ್ಲಿ ನೇತೃತ್ವವನ್ನು ಪಡೆಯುವ ಯೋಗ್ಯತೆ ಮಿಕ್ಕ ಪ್ರಾಂತಗಳಂತೆ ಕರ್ನಾಟಕಕ್ಕಿಲ್ಲ. ಇದಕ್ಕಾಗಿ ಅಸಹಕಾರ ಚಳವಳದಲ್ಲಿಯಂತೆ ಜಾತೀಯ ಚಳವಳಗಳಲ್ಲೂ ಧುಮುಕುವ ಕಲಿತನವಲ್ಲದೆ ಹೆಚ್ಚಿನ ರಾಷ್ಟ್ರೀಯ ಜಾಗೃತಿಯು ಕರ್ನಾಟಕದಲ್ಲಿಲ್ಲ. ಈ ಮಾತು ಅಭಿಮಾನದ್ದಲ್ಲ ಎಂಬ ಕಾರಣಕ್ಕೆಯೆ ಇದನ್ನು ಅಲ್ಲಗಳೆಯಲಾಗದು.

ಸಾರ್ವಜನಿಕ ಜೀವನದಲ್ಲೂ ರಾಷ್ಟ್ರೀಯ ಜಾಗೃತಿಯಲ್ಲೂ ಕರ್ನಾಟಕವು ಹಿಂದುಳಿದರೆ, ಅದೇ ನಿಜವಾಗಿ ಭಾರತ ರಾಷ್ಟ್ರೀಯ ನಿರ್ಮಾಣಕ್ಕೆ ಅಪಾಯಕಾರಕವಲ್ಲವೆ?

## ಏಕೀಕರಣವು ತರ್ಕಕ್ಕೆ ಹೊಂದಿದೆ.

ಏಕೀಕರಣವು ರಾಷ್ಟ್ರೀಕರಣಕ್ಕೆ ಅಪಾಯಕಾರಕವಲ್ಲ. ರಾಷ್ಟ್ರೀಕರಣದ ಬಲ ಬೆಳೆಯಬೇಕಾದರೆ ಏಕೀಕರಣ ಅಗತ್ಯ ಎಂದು ಹೇಳಬಹುದು. ಮುಂಬಯಿ, ಮದ್ರಾಸ, ಕೊಡಗು, ದೇಶೀಯ ಸಂಸ್ಥಾನಗಳಲ್ಲಿ ಕನ್ನಡಿಗರು ಹರಿದುಹಂಚಿ ಹೋಗಿದ್ದಾರೆ. ಕನ್ನಡಿಗರಿಗೆ ಒಂದು ವಿಶಿಷ್ಟ ಇತಿಹಾಸ, ವಿಶಿಷ್ಟ ಸಂಸ್ಕೃತಿ ಇವೆ. ಅಲ್ಲಲ್ಲಿ ಹಂಚಿ ಹೋಗಿ ಎಲ್ಲಿಯೂ ಶಕ್ತಿಸಾಲದ್ದಕ್ಕೆ ಈ ಸಂಸ್ಕೃತಿ, ಮಿಕ್ಕ ಸಂಸ್ಕೃತಿಯ ಇದಿರಿನಲ್ಲಿ ನಿರ್ಬಲವಾಗಬೇಕು ಇಲ್ಲವೆ ನಿಷ್ಫಲವಾಗಬೇಕು. ಎರಡ ರಲ್ಲಿ ಯಾವುದೆ ಪರಿಣಾಮವಾದರೂ ಭಾರತಕ್ಕೆ ಹಾನಿಯೆ ಇದೆ. ಸಂಸ್ಕೃತಿ ನಿರ್ಬಲವಾದಲ್ಲಿ ಜನತೆಯೂ ನಿರ್ಬಲ ವಾಗುವುದು; ಸಂಸ್ಕೃತಿ ನಿಷ್ಫಲವಾದಲ್ಲಿ ಬೆಳೆವಣಿಗೆ ನಿಂತು ಹೋಗುವುದು. ಯಾಕೆಂದರೆ ಒಂದು ಸಂಸ್ಕೃತಿಯ ಜನ- ತೆಯು ತನ್ನ ಸಂಸ್ಕೃತಿಯನ್ನು ಬಿಟ್ಟು ಇನ್ನೊಂದು ಸಂಸ್ಕೃತಿ ಯನ್ನು ಪಡೆಯುವುದು ಇತಿಹಾಸದಲ್ಲಿ ಕಾಣದು, ನಿಸರ್ಗ ದಿಂದ ಅಶಕ್ಯ. ಅದಕ್ಕಾಗಿ ಕನ್ನಡ ಸಂಸ್ಕೃತಿ ಉಳಿದರೇನೆ ಕನ್ನಡ ಜನ ಉಳಿಯುವುದು; ಕನ್ನಡ ಜನ ಅಳಿದರೆ ಭಾರತದ ಬಲವೂ ಅಳಿಯುವುದು. ಹೀಗೆ ಭಾರತದ ಭವಿತವ್ಯತೆಯ ದೃಷ್ಟಿಯಿಂದ ಕರ್ನಾಟಕ ಏಕೀಕರಣ ಅನಿ- ವಾರ್ಯ ಎಂದೇ ಹೇಳಬೇಕಾಗುವುದು.

## ಮಧ್ಯಸ್ಥ ತಜ್ಞರ ಅಭಿಪ್ರಾಯ

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಭಾರತದ ರಾಜಕೀಯ ಘಟನೆಯನ್ನು ನಿರ್ಣಯಿಸುವುದಕ್ಕೆ ಸೈಮನ್ ಕಮಿಶನ್ ಎಂಬ ಮಂಡಳ ಬಂದಿತ್ತಷ್ಟೆ? ಅವರಲ್ಲಿ ಬೇರೆ ಯಾವ ಗುಣಗಳಿದ್ದರೂ, ತಮ್ಮ ಮುಂದಿದ್ದ ವಿಷಯದ ಬಗ್ಗೆ ಸಾಕಷ್ಟು ಅನುಭವ ಮತ್ತು ತಜ್ಞತೆ ಇತ್ತೆಂಬುದು ಅನೇಕರು ಒಪ್ಪುವ ಮಾತು. ಆ ಮಂಡಳದವರು ಭಾರತದ ಪ್ರಾಂತಗಳ ಬಗ್ಗೆ ಹೀಗೆ ಹೇಳಿದ್ದಾರೆ *:—

The existing provincial boundaries in more than one case embrace areas and peoples of no natural affinity; and sometimes separate those who might under a different scheme be more naturally united...If those who speak the same language form a compact and self-contained area, so situated and endowed as to be able to support its existence as a seperate province there is no doubt that the use of a common speech is a strong and a natural basis for provincial individuality. But it is not the only test—race, religion, economic interests, geographical contiguity, a due balance between country and town and between coast-line and interior, may all be relevent factors.

* Simon Commission Report Vol. II—Vol. 2 Recommendation, pp. 24—25

## ಜನತೆಯ ಐಕಮತ್ಯದ ಬೇಡಿಕೆ

ಸ್ವಯಂನಿರ್ಣಯ ತತ್ತ್ವ, ಪ್ರಾಂತಿಕ ಸ್ವಾಯತ್ತತೆ, ಭಾರತದ ರಾಷ್ಟ್ರೀಕರಣ, ರಾಜಕೀಯ ಪ್ರಾಂತೀಕರಣ— ಇವೆಲ್ಲ ತತ್ತ್ವಗಳ ಒರೆಗೆ ಹಚ್ಚಿ ನೋಡಿದಲ್ಲಿ, ಕರ್ನಾಟಕ ಏಕೀಕರಣವು ಅಗತ್ಯ ಮತ್ತು ಅನಿವಾರ್ಯ ಎಂದು ಸಿದ್ಧವಾಗುತ್ತದೆ. ನಿಜವಾಗಿ ನೋಡಿದರೆ ಇಂದು ಇವೆಲ್ಲ ತತ್ತ್ವಗಳು ವ್ಯವಹಾರದಲ್ಲಿ ತಲೆ ಎತ್ತಿ ನಿಂತಿವೆ. ಹೀಗಿರುವಾಗ, ಇವುಗಳಿಗಾಗಿಯೇ ಅನಿವಾರ್ಯವೆನಿಸುವ ಏಕೀಕರಣಕ್ಕಾಗಿ ಬೇರೊಂದು ಚಳವಳದ ಅಗತ್ಯವೆ ಇಲ್ಲ. ಆದರೂ ತಾತ್ತ್ವಿಕವಾಗಿ ಅನಿವಾರ್ಯವಾಗಿದ್ದರೂ ಜನತೆಗೆ ಬೇಡವಾಗಿದ್ದರೆ ಹೇಗೆ?—ಎಂಬ ಸಂಶಯ ಬರಬಹುದಾಗಿದೆ. ಅಂತಹ ಸಂಶಯಕ್ಕಂತೂ ಎಳ್ಳಷ್ಟೂ ಆಸ್ಪದವಿಲ್ಲ. ಇಂದಿಗೆ ೨೫–೩೦ ವರ್ಷಗಳಿಂದ ಏಕೀಕರಣದ ಬೇಡಿಕೆ ಸತತವಾಗಿ ಜನತೆಯಿಂದ ಕೇಳಬರುತ್ತಿದೆ. ಮುಂದಾಳುಗಳು, ಸ್ಥಾನಿಕ ಸಂಸ್ಥೆಗಳು, ಸಾಹಿತ್ಯ–ಸಂಸ್ಕೃತಿ ಸಂಸ್ಥೆಗಳು, ಸಭೆ–ಸಮ್ಮೇಳನಗಳು, ಶಾಸನ ಸಭೆಗಳು, ವಾಣಿಜ್ಯ ಸಂಸ್ಥೆಗಳು, ಜಾತೀಯ ಸಂಸ್ಥೆಗಳು, ವ್ಯವಸಾಯ ಸಂಘಗಳು—ಇವೆಲ್ಲ ಏಕಕಂಠವಾಗಿ ಏಕೀಕರಣವನ್ನು ಬೇಡುತ್ತಲಿವೆ. ನೆಹರು ವರದಿಯಲ್ಲಿ ಈ ಬೇಡಿಕೆಗೆ ಮಾನ್ಯತೆ ದೊರೆತಿದೆ. ಕಾಂಗ್ರೆಸಿನ ಆಡಳಿತದಲ್ಲಿ ಈ ಬೇಡಿಕೆಗೆ ಉತ್ತರ ದೊರಕಿದೆ. ದುಂಡುಮೇಜು ಪರಿಷತ್ತಿನಲ್ಲಿ ಶ್ರೀ. ಬಿ. ಶಿವರಾಯರು ಈ ಬೇಡಿಕೆಯನ್ನು ಮಂಡಿಸಿದ್ದಾರೆ.

## ಭೂವಿಸ್ತಾರ ಮತ್ತು ಸಂಪತ್ತು

'ಏಕೀಕರಣವು ಜನತೆಯ ಬೇಡಿಕೆಯಾಗಿದ್ದರೂ ಏಕೀಕೃತ ಕರ್ನಾಟಕವು ಸಾಕಷ್ಟು ದೊಡ್ಡ ಪ್ರಾಂತವಾಗದು, ಆದುದರಿಂದ ಇದು ಅವ್ಯವಹಾರ್ಯ' ಎಂದು ಯಾರೂ ವಾದಿಸುವಂತಿಲ್ಲ. ಏಕೆಂದರೆ, ಒಂದು ವೇಳೆ ಸಂಸ್ಥಾನಗಳ ಕರ್ನಾಟಕವನ್ನು ಬಿಟ್ಟರೂ, ಉಳಿದ ಬ್ರಿಟಿಶ್ ಕರ್ನಾಟಕವು ವಿಸ್ತಾರದಲ್ಲಿ ೩೬,೦೦೦ ಚದರು ಮೈಲಿನಷ್ಟಿದೆ; ಎಂದರೆ ಭೂವಿಸ್ತಾರದಲ್ಲಿ ಯುರೋಪದ ಬೆಲ್ಜಿಯಂ, ಡೆನ್ಮಾರ್ಕ್ ಎರಡೂ ದೇಶಗಳನ್ನು ಕೂಡಿಸಿದರೆ ಅದಕ್ಕೂ ತುಸು ದೊಡ್ಡದೆ ಬ್ರಿಟಿಶ್ ಕರ್ನಾಟಕ! ಸದ್ಯದ ಓಡಿಸಾ ಪ್ರಾಂತಕ್ಕಿಂತಲೂ ೪,೦೦೦ ಚದರು ಮೈಲಿನ ಹೆಚ್ಚಿನ ವಿಸ್ತಾರ. ಅದರಂತೆಯೆ ಜನಸಂಖ್ಯೆಯ ದೃಷ್ಟಿಯಿಂದ ಸಿಂಧಪ್ರಾಂತಕ್ಕೆ ಸರಾಸರಿ ಇಮ್ಮಡಿ ಜನಸಂಖ್ಯೆ ಬ್ರಿಟಿಶ್ ಕರ್ನಾಟಕದಲ್ಲಿ ಎನ್ನಬಹುದು. ಆದಾಯದ ದೃಷ್ಟಿಯಿಂದಲೂ ಬ್ರಿಟಿಶ್ ಕರ್ನಾಟಕವು ಸಿಂಧ-ಆಸಾಮು-ಓರಿಸಾ ಪ್ರಾಂತಗಳಿಗಿಂತ ಹೆಚ್ಚು ಆದಾಯವುಳ್ಳದು. ಇದಲ್ಲದೆ ಜಲಪಾತ-ಕಾನನ-ದರ್ಶನೀಯ ಕ್ಷೇತ್ರಗಳು ಇವಂತೂ ಕರ್ನಾಟಕದಲ್ಲಿದ್ದಷ್ಟು ಭಾರತದ ಬೇರೆ ಯಾವ ಪ್ರಾಂತದಲ್ಲೂ ಇಲ್ಲ.

## ಬೇಡಿಕೆಯ ಅನಾದರವೆ ಮೊದಲ ದೃಷ್ಟಾಂತ

ಹೀಗೆ ಎಲ್ಲ ದೃಷ್ಟಿಗಳಿಂದಲೂ ನ್ಯಾಯವಾದ ಮತ್ತು ಎಲ್ಲರಿಂದಲೂ ಏಕಕಂಠವಾಗಿ ಬಂದ ಬೇಡಿಕೆಯ ಹಣೆಬರೆಹ ವೇನು? ಪ್ರಾಂತಿಕ ಸರಕಾರಗಳು ಹಾರಿಸಿಕೊಳ್ಳುವುವು, ಕೇಂದ್ರ ಸರಕಾರವು ಕಿವುಡಾಗಿರುವುದು. ಈ ಸಂಗತಿಯೆ

ಏಕೀಕರಣದ ೧ಗತ್ಯಕ್ಕೆ ಮೊದಲ ದೃಷ್ಟಾಂತ ಮತ್ತು ಕಾರಣ ಎಂದು ಹೇಳಬಹುದು. ಜಾತಿ-ಪ್ರಾಂತ-ರಾಜಕೀಯ ಪಕ್ಷಗಳಿಂದ ಪರಸ್ಪರ ಭಿನ್ನರಾದ ಜನರು ಒಂದುಗೂಡಿ ಬೇಡಿದ್ದಕ್ಕೆ ಸರಕಾರವು ಹೀಗೆ ಅನಾದರವನ್ನು ತೋರಿಸಿದರೆ, ಸದ್ಯದ ಸ್ಥಿತಿಯಲ್ಲಿ ಆಯಾ ಪ್ರಾಂತಗಳಲ್ಲಿ ಅಲ್ಪ-ಸಂಖ್ಯಾಕರಾಗಿದ್ದ ಕನ್ನಡಿಗರ ಬೇಡಿಕೆಗಳಿಗೆ ಆಯಾ ಸರಕಾರಗಳು ಎಷ್ಟೊಂದು ಅನಾದರವನ್ನು ತೋರಿಸುತ್ತಿರಬಹುದು? ಧಾರವಾಡದಲ್ಲಿ ಸ್ಥಾಪಿತವಾದ ಒಂದು ಸಂಸ್ಥೆಗೆ ಸರಕಾರದ ಮನ್ನಣೆಯನ್ನು ಪಡೆಯುವುದಕ್ಕೆ ಇಡಿಯ ಮುಂಬಯಿ ಕರ್ನಾಟಕದಲ್ಲಿ ಚಳವಳವನ್ನು ಹೂಡಬೇಕು! ಇಷ್ಟೊಂದು ಬೆಲೆಬಾಳದ ಕನ್ನಡಿಗರು ಮುಂಬಯಿ ಸರಕಾರಕ್ಕೆ. ಸರಕಾರದ ಸಹಾಯದಿಂದ ಅಸ್ತಿತ್ವದಲ್ಲಿ ಬಂದ ಸಾರ್ವಜನಿಕ ಸಂಸ್ಥೆಗಳು ಕರ್ನಾಟಕದಲ್ಲಿ—ಸ್ಥೂಲ ದೃಷ್ಟಿ-ಯಿಂದ—ಇಲ್ಲವೇ ಇಲ್ಲ ಎಂದು ಹೇಳಬಹುದು. ಉಚ್ಚ ಶಿಕ್ಷಣ, ವಿಶಿಷ್ಟ ಶಿಕ್ಷಣ, ಔದ್ಯೋಗಿಕ ಶಿಕ್ಷಣ, ಒಕ್ಕಲ ತನದ ಶಿಕ್ಷಣ— ಇದನ್ನು ಪಡೆಯಬೇಕೆನ್ನುವ ಕನ್ನಡ ವಿದ್ಯಾರ್ಥಿಯು, ೩೦೦ ರಿಂದ ೫೦೦ ಮೈಲು ದೂರದಲ್ಲಿರುವ ಪುಣೆ-ಮುಂಬಯಿಗಳಿಗೆಯೆ ಹೋಗಬೇಕು! ನಾಲ್ಕು ಜಿಲ್ಲೆಯ ಕರ್ನಾಟಕದಲ್ಲಿ ಸಾಕಷ್ಟು ಕಲಿತವರಿಲ್ಲ ಎಂಬ ನೆಪದಿಂದ ಕನ್ನಡೇತರರನ್ನೆ ಕರ್ನಾಟಕ ಜಿಲ್ಲೆಗಳಿಗೆ ಅಧಿ-ಕಾರಿಗಳನ್ನಾಗಿ ಮುಂಬೈ ಸರಕಾರವು ನಿಯಮಿಸಬೇಕು. ಮುಂಬಯಿ ಶಾಸನಸಭೆಯಲ್ಲಿ ಇಂಗ್ಲಿಶ್ ಇಲ್ಲವೆ ಮರಾಠಿ ಬಲ್ಲ ಕನ್ನಡಿಗನೆ ಕರ್ನಾಟಕದ ಪ್ರತಿನಿಧಿಯಾಗಬೇಕು. ತೋರಿಕೆಗೆ ಕೂಡ ಕಾಣಬರುವ ಈ ಅನ್ಯಾಯಗಳು

ಸರಕಾರದ ಅನಾದರದ ಚಿಹ್ನೆಗಳು. ಇಷ್ಟು ವರ್ಷ ಮುಂಬಯಿ ಪ್ರಾಂತಕ್ಕೆ ಸೇರಿದ್ದರೂ ಕರ್ನಾಟಕ ಭಾಗವೆ ಯಾಕೆ ಎಲ್ಲ ದೃಷ್ಟಿಗಳಿಂದ ಮಹಾರಾಷ್ಟ್ರ-ಗುಜರಾತ ಭಾಗ-ಗಳಿಗಿಂತ ಹಿಂದುಳಿಯಬೇಕು ?

## ಹಿಂದುಳಿದದ್ದಕ್ಕೆಯೆ ಏಕೀಕರಣ

ಮುಂಬಯಿ ಪ್ರಾಂತದಲ್ಲಿಯಂತೆ ಮದ್ರಾಸದಲ್ಲೂ ಕರ್ನಾ-ಟಕ ಭಾಗವು ಹಿಂದುಳಿದಿದೆ. ಕರ್ನಾಟಕವು ಹಿಂದುಳಿದಿದೆ ಎಂದು ಸರಕಾರವು ನಮಗೆ ಹೇಳಬೇಕಾಗಿಲ್ಲ; ನಾವೇ ಆ ಮಾತನ್ನು ಒಪ್ಪುತ್ತೇವೆ. 'ಹಿಂದುಳಿದ ಕರ್ನಾಟಕವು ಸ್ವತಂತ್ರ ಪ್ರಾಂತವಾಗಲಾರದು' ಎಂದೂ ಸರಕಾರವು ಹೇಳಲಾರದು. ಯಾಕೆಂದರೆ 'ಹಿಂದುಳಿದದ್ದಕ್ಕಾಗಿಯೆ ಇಂದು ಏಕೀಕರಣ ಅಗತ್ಯ' ಎಂದು ನಾವು ಹೇಳುತ್ತಲಿದ್ದೇವೆ. ಅಲ್ಲಲ್ಲಿ ನಮ್ಮನ್ನು ಜೋಡಿಸಿದ್ದಕ್ಕಾಗಿ ಎಲ್ಲಿಯೂ ಶಕ್ತಿಯು ಸಾಲದೆ ನಾವು ಹಿಂದುಳಿದಿದ್ದೇವೆ; ಹೀಗೆಯೆ ನಾವು ವಿಚ್ಛಿನ್ನರಾಗಿ ಬೇರೆ ಬೇರೆ ಪ್ರಾಂತಗಳ ತುದಿಯಲ್ಲಿ ಜೋತು ಬಿದ್ದರೆ ನಾವು ಮುಂದಾಗುವುದು ಶಕ್ಯವೇ ಇಲ್ಲ; ಅದಕಾಗಿ ಈ ವಿಚ್ಛಿನ್ನ ವೈಧವ್ಯ ನಮಗಿನ್ನು ಸಾಕು— ಎಂದು ನಾವು ಸಾರುತ್ತಿದ್ದೇವೆ. 'ಏಕೀಕರಣವನ್ನು ಮಾನ್ಯ ಮಾಡದ ಯಾವ ಘಟನೆಯನ್ನೂ ಕನ್ನಡಿಗರು ಒಪ್ಪುವುದಿಲ್ಲ' ಎಂದು ಏಕೀಕರಣ ಪರಿಷತ್ತು ಸಾರಿದ್ದು ಸರಕಾರದ ಅನಾ-ದರಕ್ಕಾಗಿ ಮತ್ತು ಕನ್ನಡಿಗರ ದುಃಸ್ಥಿತಿಗಾಗಿ ಕಳವಳಗೊಂಡು.

## ಸದ್ಯದ ಪರಿಸ್ಥಿತಿ ಅಸಹನೀಯ

ಅನೇಕ ಆಡಳಿತಗಳಲ್ಲಿ ಹರಿದು ಹಂಚಿ ಹೋದ ಕರ್ನಾಟಕ ಪ್ರದೇಶಗಳನ್ನು ಒಂದೇ ಆಡಳಿತದಲ್ಲಿ ಸೇರಿಸುವುದು ಅತ್ಯಂತ ಅನನುಕೂಲವಾದ ಪ್ರಶ್ನೆ ಎಂದು ಹೇಳಲಾಗುತ್ತಿದೆ. ಈ ಮಾತಿನ ಅರ್ಥವೇನು? ಬ್ರಿಟಿಶರು ಆ ಕಾಲದಲ್ಲಿ ತಾವು ಗೆದ್ದಂತೆ ಪ್ರದೇಶಗಳನ್ನು ಆಯಾ ಜಿಲ್ಲೆಗಳಿಗೆ ಜೋಡಿಸುತ್ತ ಹೋದರಲ್ಲದೆ, ಆಡಳಿತದ ಅನುಕೂಲತೆಯನ್ನು ನೋಡಿಕೊಂಡು ಪ್ರಾಂತಗಳನ್ನು ರಚಿಸಲಿಲ್ಲ. ಹೀಗಿರುವಾಗ ಅನುಕೂಲತೆಯ ಪ್ರಶ್ನೆಗೆ ಈಗೇಕೆ ಇಷ್ಟು ಪ್ರಾಮುಖ್ಯ? ಇದಲ್ಲದೆ, ಇಂದು ಕರ್ನಾಟಕವನ್ನು ಒಂದುಗೂಡಿಸುವುದೆಂದರೆ ಯಾರಿಗೆ ಅನನುಕೂಲ? ಈ ಪ್ರಶ್ನೆಗೆ ಪ್ರಜೆಗಳ ದೃಷ್ಟಿಯಿಂದ ಉತ್ತರ ಕೊಡಬೇಕೆ? ಆಡಳಿತಗಾರಿಕೆಯ ದೃಷ್ಟಿಯಿಂದಲೆ? ಮನೆಯ ಅನುಕೂಲತೆಗಾಗಿ ಸಂಸಾರವೆ? ಸಂಸಾರದ ಅನುಕೂಲತೆಗಾಗಿ ಮನೆಯ ಆಡಳಿತವೆ? ಮುಂಬಯಿ ಪ್ರಾಂತಕ್ಕೆ ಸೇರಿದ ಕನ್ನಡ ಜಿಲ್ಲೆಯನ್ನು ಕಡಿದು ದಕ್ಷಿಣ ಕನ್ನಡ ಜಿಲ್ಲೆಯೊಂದು ಮದ್ರಾಸ ಪ್ರಾಂತಕ್ಕೆ ಸೇರಿಸುವುದಕ್ಕಿಂತ, ಕಡಿದ ಜಿಲ್ಲೆಗಳನ್ನು ಒಂದುಗೂಡಿಸುವುದು ಅನನುಕೂಲವೇ? ಒಂದು ವೇಳೆ ಸದ್ಯಕ್ಕೆ ದೇಶೀಯ ಸಂಸ್ಥಾನಗಳು ಹೀಗೆಯೆ ಉಳಿದರೂ, ಇಂದು ಮುಂಬಯಿ-ಮದ್ರಾಸಗಳಲ್ಲಿ ನಡುನಡುವೆ ದ್ವೀಪಗಳಂತೆ ದೇಶೀಯ ಸಂಸ್ಥಾನಗಳ ಪ್ರದೇಶ ಹೊಕ್ಕಿರುವಾಗ, ಎಷ್ಟು ಅನನುಕೂಲವೊ ಅದರಂತೆಯೆ ಕರ್ನಾಟಕವು ಪ್ರತ್ಯೇಕ ಪ್ರಾಂತವಾದಾಗ ಮಧ್ಯದಲ್ಲಿ ಸಂಸ್ಥಾನದ ತುಣುಕುಗಳು ಸಿಕ್ಕಿಕೊಂಡರೆ ಅಷ್ಟೇ ಅನುಕೂಲವೆನ್ನಿಸಬಾರದೇಕೆ? ಬ್ರಿಟಿಶ್

ಕರ್ನಾಟಕವನ್ನೆ ತೆಗೆದುಕೊಂಡರೂ ೮ ಪೂರ್ತಿಯಾದ ಜಿಲ್ಲೆಗಳು ಇನ್ನುಳಿದ ಪ್ರದೇಶಗಳು ಎರಡು ಜಿಲ್ಲೆಗಳಷ್ಟು, ಎಂದರೆ ಒಟ್ಟು ಬ್ರಿಟಿಶ ಕರ್ನಾಟಕದಲ್ಲಿ ಹತ್ತು ಜಿಲ್ಲೆಗಳು. ಸಿಂಧದಲ್ಲಿ ೭ ( ಏಳು ), ಓಡಿಸಾದಲ್ಲಿ ೫ ( ಐದು ) ಜಿಲ್ಲೆಗಳಿದ್ದಾಗ ಆಗದ ಅನನುಕೂಲ ಹತ್ತು ಜಿಲ್ಲೆಗಳ ಪ್ರದೇಶದಲ್ಲಿ ಯಾಕಾಗಬೇಕು ?

## ಪ್ರಾಂತಾಧಿಕಾರವು ವೆಚ್ಚದ ವಿಷಯು

ಇನ್ನೂ ಒಂದು ಮಾತನ್ನು ಏಕೀಕರಣದ ವಿರೋಧಿಗಳು ಹೇಳಬೇಕಾಗಿದೆ. ಕರ್ನಾಟಕವು ಪ್ರತ್ಯೇಕ ಪ್ರಾಂತವಾಗುವುದೆಂದರೆ ಕೇವಲ ಜಿಲ್ಲೆಗಳನ್ನು ಒಂದು ಆಡಳಿತದಲ್ಲಿ ತರುವುದಷ್ಟೆ ಅಲ್ಲ; ಆ ಆಡಳಿತಕ್ಕೆ ಒಂದು ಮೂರ್ತಸ್ವರೂಪ ಬೇಕು. ಅದನ್ನೆ ಬಿಚ್ಚುಮಾತಿನಲ್ಲಿ ಹೇಳುವುದಾದರೆ ಪ್ರಾಂತದ ಅಧಿಕಾರಕ್ಕೆ ತಕ್ಕುದಾದ ಸ್ಥಾನ ಬೇಕು. ಮೇಲಧಿಕಾರಿ, ಎಲ್ಲ ಖಾತೆಗಳ ಅಧಿಕಾರಿಗಳು, ನ್ಯಾಯಸ್ಥಾನ ಮುಂತಾಗಿ ಅನೇಕ ದೊಡ್ಡ ದೊಡ್ಡ ಕಟ್ಟಡಗಳು ಬೇಕು. ಅದೊಂದು ಮಿಗಿದ ಮತ್ತು ನಿರರ್ಥಕ ವೆಚ್ಚ ಎಂದು ಹೇಳಬಹುದು. ನಿಜ, ಪ್ರತ್ಯೇಕ ಪ್ರಾಂತವಾದಲ್ಲಿ ರಾಜಧಾನಿ ಮತ್ತು ಸರಕಾರೀ ಕಟ್ಟಡಗಳು ಬೇಕು, ನಿಜ; ಈಗ ಅಂತಹ ಕಟ್ಟಡಗಳು ಕರ್ನಾಟಕದಲ್ಲಿಲ್ಲ, ನಿಜ. ಆದರೆ ಈ ಮಾತಿನಿಂದ ನಿಷ್ಪನ್ನವಾಗುವುದೇನು? ಮುಂಬಯಿಯಲ್ಲಾಗಲಿ ಮದ್ರಾಸದಲ್ಲಾಗಲಿ ಕನ್ನಡ ಜಿಲ್ಲೆಗಳು ಪ್ರಾಂತಕ್ಕೆ ಒಳಪಟ್ಟು ಇಷ್ಟು ವರ್ಷಗಳಾದರೂ ಹೇಳಿಕೊಳ್ಳುವಂತಹ ಸರಕಾರೀ ಕಟ್ಟಡಗಳಿಲ್ಲ ಒಂದು ಕನ್ನಡ ಜಿಲ್ಲೆಯಲ್ಲಿ! ಆದರೆ

ಕನ್ನಡಿಗರ ದುಡ್ಡು ಸಿಂಧದ ಸಕ್ಕರ ಬರಾಜ್, ಮುಂಬಯಿಯ ಬ್ಯಾಕ್‌ಬೇ ಸ್ಕೀಮ್, ಮದ್ರಾಸಿನ ಮೆಟ್ಟೂರ ಡ್ಯಾಮ್ ಇವುಗಳಿಗಾಗಿ ಧಾರಾಳವಾಗಿ ವೆಚ್ಚವಾಗಿದೆ! ಇದು ನಿಜವಾದ ಅನನುಕೂಲ. ಈ ಪರಿಸ್ಥಿತಿಯನ್ನು ಹೊಗಲಾಡಿಸುವುದೆ ಅನುಕೂಲ. ಇದು ಎಷ್ಟೊಂದು ವೆಚ್ಚದ ವಿಷಯವೆನ್ನಿಸಿವರೂ ಅದನ್ನು ಸಾಧಿಸುವುದೆ ಅನುಕೂಲ, ಮಿಕ್ಕಿದ್ದೆಲ್ಲ ಅನನುಕೂಲ, ಅಪಾಯುಕರ.

## ಪ್ರಾಣಘಾತಕ

ಅಪಾಯುಕರ ಎಂಬುದು ಅಲಂಕಾರವೂ ಅಲ್ಲ, ಅತಿಶಯೋಕ್ತಿಯೂ ಅಲ್ಲ. ಈಗ ಒಂದೆರಡು ಅನುಭವಗಳನ್ನು ನೋಡಿಕೊಳ್ಳೋಣ. ಮುಂಬಯಿ ಪ್ರಾಂತದಲ್ಲಿ ಮುಂಬಯಿ ರಾಜಧಾನಿ, ಪುಣೆ ಪಟ್ಟಣ, ಅಹಮ್ಮದಾಬಾದು ವ್ಯಾಪಾರ-ಕಾರಖಾನೆಗಳ ಕೇಂದ್ರ. ವಿಶ್ವವಿದ್ಯಾಲಯ, ಮುಖ್ಯ ನ್ಯಾಯಕಚೇರಿ, ಔದ್ಯೋಗಿಕ ಶಿಕ್ಷಣ ಸಂಸ್ಥೆಗಳು, ದೊಡ್ಡ ದೊಡ್ಡ ಆಸ್ಪತ್ರೆಗಳು, ಅನೇಕ ಸರಕಾರೀ ಖಾತೆಗಳ ಕೇಂದ್ರ ಕಚೇರಿಗಳು, ದೊಡ್ಡಳತೆಯ ( Broad guage ) ರೈಲು ದಾರಿ—ಇವೆಲ್ಲ ಮುಂಬಯಿ-ಪುಣೆ-ಅಹಮ್ಮದಾಬಾದುಗಳಲ್ಲಿ ಇವೆ. ಇದಕಾಗಿ ನಮ್ಮಲ್ಲಿಯ ಸಾಹಸಿಕರು-ಸೆಟ್ಟಿಗಳು-ವಕೀಲರು - ವಿದ್ಯಾವಂತರು - ಮೇಧಾವಿಗಳು ಅನೇಕರು ಕರ್ನಾಟಕವನ್ನು ಬಿಟ್ಟು ಆ ಪ್ರದೇಶಗಳಲ್ಲಿಯೆ ನೆಲಸಿರುವರು. ಕ್ರಮೇಣ ಕನ್ನಡವನ್ನೂ ಕನ್ನಡತನವನ್ನೂ ಬಿಟ್ಟು ಮರಾಠಿಗೊ ಗುಜರಾತಿಗೊ ಮೊರೆಹೋಗುವರು. ಕಾಲಾನುಸಾರ, ಇವರು, ತಾವು ಕನ್ನಡಿಗರೇ ಅಲ್ಲ ಎಂದು

ಹೇಳಿಕೊಳ್ಳುವ ಪರಿಸ್ಥಿತಿಗೆ ಮುಟ್ಟುವರು! ಇದರ ಅರ್ಥ ವೇನು? ಕರ್ನಾಟಕದ ಸಿರಿಸಂಪತ್ತಲ್ಲದೆ ಬುದ್ಧಿವಂತಿಕೆ ಕೂಡ ಕ್ರಮೇಣ ಕರ್ನಾಟಕದಿಂದ ಮಾಯವಾಗುವುದು. ಎಂದರೆ ಕರ್ನಾಟಕದ ಪ್ರಾಣವೆ ಕ್ರಮೇಣ ಜಾರುತ್ತಲಿವೆ ಎಂದು ಹೇಳಬಹುದು.

## ಇನ್ನೊಂದು ಅನುಭವ

ಕರ್ನಾಟಕದ ಹೊರಗೆ ಕಂಡುಬರುವಂತೆ ಅಪಾಯವು ಕರ್ನಾಟಕದ ಒಳಗೂ ಇದೆಯಲ್ಲದೆ, ದಿನದಿನಕ್ಕೆ ಬೆಳೆಯುತ್ತಲಿದೆ. ಪ್ರಾರಂಭದಿಂದಲೂ ಶಿಕ್ಷಣವೂ ಶಿಕ್ಷಣಸಂಸ್ಥೆಗಳೂ ಸರಕಾರಕ್ಕೆ ಕರ್ನಾಟಕಕ್ಕಿಂತ ಸನಿಯದ ಕನ್ನಡೇತರ ಜಿಲ್ಲೆಗಳಲ್ಲಿಯೇ ಹೆಚ್ಚಾಗಿ ಇದ್ದುದರಿಂದ, ಸರಕಾರೀ ಅಧಿಕಾರಿಗಳಲ್ಲಿ (ಎಂದರೆ ಶಿಕ್ಷಣ ಪಡೆದವರಲ್ಲಿ) ಕನ್ನಡೇತರರ ಸಂಖ್ಯೆಯೆ ಹೆಚ್ಚು. ಇಂದಿಗೂ ಈ ಪ್ರಮಾಣ ಹಾಗೆಯೆ ಉಳಿದಿದೆ. ಕನ್ನಡ ಜಿಲ್ಲೆಗಳ ಮೇಲಧಿಕಾರಿಗಳೆಲ್ಲ ಸಾಮಾನ್ಯವಾಗಿ ಕನ್ನಡೇತರರೆ. ಮೇಲಧಿಕಾರಿಗಳ ಭಾಷೆಯೆ ಮಿಕ್ಕವರ ಎಂದರೆ ಚಿಕ್ಕಧಿಕಾರಿಗಳ ಭಾಷೆ. ಮೊದಲಿನ ಸ್ಥಾನ, ಹೆಚ್ಚಿನ ಅಭಿಮಾನ ಆ ಭಾಷೆಗಾಗಿಯೆ ಎಂದರೆ ಕನ್ನಡೇ-ತರ ಭಾಷೆಗಾಗಿಯೆ. ಹೀಗಾಗಿ ಕ್ರಮೇಣ ಕನ್ನಡ ನುಡಿಯ ಅಭಿಮಾನ—ಕ್ಷೇತ್ರವೆ ಚಿಕ್ಕದಾಗುತ್ತ ನಡೆಯಿತು. ಹತ್ತು-ಹತ್ತು ವರುಷಗಳ ಖಾನೇಸುಮಾರಿಗೊಮ್ಮೆ ಕನ್ನಡ ಜನರ ಸಂಖ್ಯೆಯ ಪ್ರಮಾಣವು ಕಡಮೆಯಾಯಿತಲ್ಲದೆ ಕನ್ನಡದ ಕ್ಷೇತ್ರವೂ ಕಡಮೆಯಾಗತೊಡಗಿತು. ಇಂದು ಕರ್ನಾಟಕದ ಗಡಿನಾಡಿನ ಸಮಸ್ಯೆಗೆ ಈ ಸಂಗತಿಯೂ ಕಾರಣವಾಗಿದೆ.

ಮಹಾರಾಷ್ಟ್ರಕ್ಕೆ, ಆಂಧ್ರಕ್ಕೆ ಹೊಂದಿದ ಕನ್ನಡ ಪ್ರದೇಶವು ಕ್ರಮೇಣ ಒಳಸೇರುತ್ತ ನಡೆದಿದೆ. ಇದನ್ನು ಸರಿಪಡಿಸಲು ಕನ್ನಡ ಅಧಿಕಾರಿಗಳ ನೆರವು ಬೇಕು. ಆದರೆ ಎರಡೂ ಪ್ರಾಂತಗಳಲ್ಲಿ ಅಲ್ಪಸಂಖ್ಯಾಕರಾದ ಕನ್ನಡಿಗರಲ್ಲಿ ಅಷ್ಟು ಪ್ರಮಾಣದ, ಅಷ್ಟು ಧೈರ್ಯದ, ಅಂತಹ ಅಭಿಮಾನದ ಕನ್ನಡ ಮೇಲಧಿಕಾರಿಗಳು ಬೇಕಲ್ಲವೆ?

## ಸತ್ತ್ವಭಂಗವಾಗುತ್ತಲಿದೆ

ಕನ್ನಡಿಗರಲ್ಲಿ ಧೈರ್ಯದವರಾಗಲಿ ಅಭಿಮಾನಿಗಳಾಗಲಿ ಇಲ್ಲವೆಂದಲ್ಲ; ಆದರೆ ಅವುಗಳ ಜೊತೆಗೆ ಅಧಿಕಾರವೂ ಬೇಕು. ಆ ಅಧಿಕಾರವುಳ್ಳ ಅಂತಹ ಕನ್ನಡಿಗರು ವಿರಳ ಎಂದು ಅಭಿಪ್ರಾಯ. ಇದೇ ಸಂದರ್ಭದಲ್ಲಿ ಸದ್ಯದ ಪರಿಸ್ಥಿತಿಯಿಂದ ಕರ್ನಾಟಕಕ್ಕೆ ಅಪಾಯಕಾರಕವಾಗುವಂತೆ ಕನ್ನಡಿಗರ ಸತ್ತ್ವಭಂಗ ಹೇಗಾಗುತ್ತಿದೆ ಎಂಬುದನ್ನೂ ನೋಡಬಹುದು. ಇಂದಿಗೂ ಅನೇಕ ಕನ್ನಡಿಗರು ಕರ್ನಾಟಕದ ಹೊರಗಿನ ಪಟ್ಟಣಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆಯಬೇಕಾಗುತ್ತದೆ ಎಂದು ಮೇಲೆ ಸೂಚಿಸಿದೆಯಷ್ಟೆ? ತರುಣ ವಯಸ್ಸಿನಲ್ಲಿ ಇದರ ಪರಿಣಾಮವು ಅನಿವಾರ್ಯವಾಗಿ—ಆದರೂ ಕರ್ನಾಟಕದ ದೃಷ್ಟಿಯಿಂದ—ಅತ್ಯಂತ ಅಪಾಯಕಾರಕವಾಗುತ್ತಲಿದೆ. ಕನ್ನಡ ತರುಣರು ಮರಾಠಿ ಇಲ್ಲವೆ ಆಂಧ್ರ ವ್ಯಕ್ತಿಗಳ, ಸಾಹಿತ್ಯದ ವರ್ಚಸ್ಸಿಗೆ ಮೋಹಗೊಳ್ಳುತ್ತಾರೆ. ಹಾಗೆ ಮೋಹಾಂಧರಾಗಿಯೆ ಕರ್ನಾಟಕಕ್ಕೆ ಮರಳುತ್ತಾರೆ. ಕರ್ನಾಟಕ-ಕನ್ನಡ ಇವುಗಳ ಬಗ್ಗೆ ಆತ್ಮೀಯತೆಯಾಗಲಿ ಅಭಿಮಾನವಾಗಲಿ ಅಷ್ಟೊಂದು ಸಹಜವಾಗಿ ಇವರ

ಹೃದಯದಲ್ಲಿ ಉದ್ಭವಿಸುವುದಿಲ್ಲ. ಇದೆಂದರೆ ಕನ್ನಡಿಗರ ವ್ಯಕ್ತಿತ್ವದ ನಾಶವೆಂದೇ ಹೇಳಬೇಕಾಗುವುದು. ಇಂದಿಗೂ ಅನೇಕ ಕರ್ನಾಟಕ ಮುಂದಾಳುಗಳು ಎಷ್ಟೋ ತರುಣರು ಕರ್ನಾಟಕ-ಕನ್ನಡಗಳಿಗಾಗಿ ಅನಾಸ್ಥೆಯನ್ನು ತೋರಿಸುತ್ತಿರುವುದು ಈ ಕಾರಣಕ್ಕಾಗಿಯೆ. ಎಂದರೆ ವಿಚ್ಛಿನ್ನ ಕರ್ನಾಟಕಕ್ಕಾಗಿ ಪ್ರಾಣಿಮಾತ್ರಕ್ಕೆ ಸಹಜವಾದ ಸ್ವಾಭಿಮಾನ ಕೂಡ ಅನೇಕ ಕನ್ನಡಿಗರಲ್ಲಿಲ್ಲ!

## ಏಕೀಕರಣ ಇಲ್ಲವೆ ಮರಣ

ಮೇಲಿನ ಅನುಭವಗಳನ್ನು ಸರಿಯಾಗಿ ತಿಳಿದುಕೊಂಡರೆ ಒಂದು ಮಾತು ಸ್ಪಷ್ಟವಾಗಿ ನಮ್ಮನ್ನು ದಿಟ್ಟಿಸುವಂತೆ ಎದ್ದು ನಿಲ್ಲುವುದು. ಅದೇಂದರೆ ಕರ್ನಾಟಕವು ಈಗಿನಂತೆ ಹರಿದು ಹಂಚಿಯೆ ಉಳಿದುಕೊಂಡರೆ ಕ್ರಮೇಣ ಕನ್ನಡತನವೆ ಅಳಿದು ಹೋಗಬಹುದಾಗಿದೆ. ಕರ್ನಾಟಕದ ಪ್ರದೇಶವು ಕಡಮೆಯಾಗುತ್ತ ನಡೆದರೂ ಅಷ್ಟೊಂದು ನಾವು ಹೆದರಬೇಕಾಗಿಲ್ಲ. ಆದರೆ ಕನ್ನಡತನವೆ ಅಳಿದುಹೋಗುವುದಾದರೆ ನಾವು ಹೆದರದಿದ್ದರೆ ಬುದ್ಧಿಶೂನ್ಯರೆನ್ನಿಸುವೆವು. ಅಳಿದ ಸಂಪತ್ತನ್ನು ಮರಳಿ ಪಡೆಯಬಹುದು; ಕಳೆದ ಪ್ರಾಣವು ಮಾತ್ರ ಕಲಿಯುಗ ಮುಗಿದರೂ ಮರಳಿ ಬರುವಂತಿಲ್ಲ. ಈ ಮಾತಿಗಾಗಿಯೆ ಏಕೀಕರಣದ ಪ್ರಶ್ನೆ ಎಂದರೆ ಕನ್ನಡಿಗರಿಗೆ ಜೀವದ ಪ್ರಶ್ನೆಯಾಗಿದೆ ಎಂದು ಹೇಳುವುದು. ಹೇಗೆ ರಾಜಕೀಯ ತತ್ತ್ವದಿಂದ, ವಸ್ತುಸ್ಥಿತಿಯ ತರ್ಕದಿಂದ ಏಕೀಕರಣವು ಅನಿವಾರ್ಯವೊ, ಹಾಗೆಯೆ ಕನ್ನಡತನದ ಸಂಸ್ಕಾರವನ್ನು ಉಳಿಸುವ ದೃಷ್ಟಿಯಿಂದಲೂ ಏಕೀಕರಣವು

ಅನಿವಾರ್ಯ. ಇದಲ್ಲದೆ ಸದ್ಯದ ಪರಿಸ್ಥಿತಿಯಲ್ಲಿ, ಭಾರತದ ಭವಿತವ್ಯತೆಯಲ್ಲಿ ಕರ್ನಾಟಕದ ಏಕೀಕರಣವು ಕೂಡಲೆ ವ್ಯವಹಾರರಂಗಕ್ಕೆ ಬರಲೇಬೇಕಾಗಿದೆ. ಏಕೀಕರಣವು ಅನಿವಾರ್ಯವೆಂದರೆ ಮೋಕ್ಷದಂತೆ ಕೊನೆಗೊಮ್ಮೆ ಸಾಧಿಸಬೇಕಾದ ಧ್ಯೇಯ ಎಂದು ತಿಳಿಯುವಂತಿಲ್ಲ. ಸಾಧಿಸಲೇಬೇಕು ಮತ್ತು ಕೂಡಲೇ ಸಾಧಿಸಬೇಕು—ಎಂದು ಇಂದಿನ ಭಾರತದ ಪರಿಸ್ಥಿತಿಯೆ ನಮ್ಮನ್ನು ಒತ್ತಾಯಪಡಿಸುತ್ತಲಿದೆ ಎಂಬುದನ್ನು ನಾವು ತಿಳಿದುಕೊಳ್ಳೋಣ.

## ಕರ್ನಾಟಕದ ಕೀಲುದೆಸೆ

ಯುದ್ಧ ಮುಗಿವ ಸಮಯಕ್ಕೆ ಭಾರತದ ರಾಜಕೀಯ ಘಟನೆಯಲ್ಲಿ ಬದಲಾವಣೆಗಳಾಗುವುದು ಖಂಡಿತ ಎಂದು ತಜ್ಞರ, ಅನುಭವಿಕರ ನಿರೀಕ್ಷಣೆ ಇದೆ ಯುದ್ಧ ಮುಗಿವ ಕಾಲ ಕೂಡ ತೀರ ಸಮೀಪದಲ್ಲಿದೆ ಎಂಬುದೂ ಸ್ಪಷ್ಟವಾಗುತ್ತಲಿದೆ. ಭಾರತದ ಸ್ವಾತಂತ್ರ್ಯದ ಬಗ್ಗೆ, ಭವಿತವ್ಯತೆಯ ಬಗ್ಗೆ ಎಷ್ಟೆ ನಿರಾಶೆಯನ್ನು ತಾಳಿದರೂ,—೧೯೩೫–೩೭ರ ಘಟನೆಗಿಂತ ಒಂದು ಗುಂಜಿ ತೂಕದಷ್ಟಾದರೂ, ಅಧಿಕಾರಕ್ಷೇತ್ರವಾಗಲಿ ಆಡಳಿತದ ಸ್ವಾತಂತ್ರ್ಯವಾಗಲಿ ಹೆಚ್ಚುವುದೆಂಬುದು ನಿರ್ವಿವಾದ. ಇದಲ್ಲದೆ ಬ್ರಿಟಿಶರ ಸಹಾಯದಿಂದ, ಅಮೇರಿಕೆಯ ಆಶೀರ್ವಾದದಿಂದ, ನಮ್ಮ ಧನಿಕರ ಸ್ವಾರ್ಥಸಾಹಸಗಳಿಂದ ಭಾರತದ ಔದ್ಯೋಗೀಕರಣ ಮತ್ತು ಆರ್ಥಿಕ ಸಂಪತ್ತು ಮೊದಲಿನಿಂದಲೂ ದೊಡ್ಡ ಪ್ರಮಾಣದಲ್ಲಿಯೆ ಬೆಳೆಯಬಹುದು. ಈ ಘಟನೆಗಳಿಗೆ ಆಯಾ ಪ್ರಾಂತಿಕ ಸರಕಾರಗಳ ಸಂಪೂರ್ಣ ಸಹಾಯವಿರು-

ವುದೂ ಸಹಜ. ಈ ಪ್ರಾಂತಿಕ ಸರಕಾರಗಳ ಮಾದರಿ ೧೯೩೫–೩೭ರದೆ ಹೆಚ್ಚುಕಡಮೆ ಮಾದರಿಯಾಗಬಹುದು. ಈ ಮಾದರಿಯಲ್ಲಿ ಮುಂಬಯಿ-ಮದ್ರಾಸ ಪ್ರಾಂತಗಳಲ್ಲಿ ಕರ್ನಾಟಕದ ಸ್ಥಾನವೇನು? ಮುಂಬಯಿ ಶಾಸನಸಭೆಯ ಒಟ್ಟು ೧೭೫ ಸದಸ್ಯರಲ್ಲಿ ೨೯ ಮಾತ್ರ ಕರ್ನಾಟಕದವರು; ಮದ್ರಾಸ ಶಾಸನಸಭೆಯ ೨೧೫ರಲ್ಲಿ ಕೇವಲ ಹನ್ನೆರಡು ಕನ್ನಡಿಗರು. (ಕೇಂದ್ರ ಶಾಸನಸಭೆಯ ೧೪೨ರಲ್ಲಿ ಕನ್ನಡಿಗರು ಇಬ್ಬರೇ ಇಬ್ಬರು!). ಸಂಖ್ಯೆ ಒಂದು ವೇಳೆ ಹೆಚ್ಚುಕಡಿಮೆಯಾದರೂ ಒಟ್ಟು ಸಂಖ್ಯೆಗೆ ಕರ್ನಾಟಕದ ಪ್ರಮಾಣವು ಹೆಚ್ಚೀತೆಂದು ನಂಬಲು ಯಾವ ಕಾರಣವೂ ಇಲ್ಲ.

## ಒಂದೇ ಒಂದು ಸಾಧನ

ಇಂತಹ ಕಡಮೆ ಪ್ರಮಾಣದಲ್ಲಿರುವ ಕನ್ನಡ ಸದಸ್ಯರು ಆಯಾ ಸರಕಾರಗಳಲ್ಲಿ ಯಾವ ಸ್ಥಾನ ಇಲ್ಲವೆ ವರ್ಚಸ್ಸನ್ನು ಪಡೆಯಬಹುದು? ಹಿಂದಿನ ಅನುಭವದಿಂದಲೆ ಈ ಮಾತನ್ನು ತಿಳಿದುಕೊಳ್ಳಬಹುದು. ಮುಂಬಯಿ ಕಾಂಗ್ರೆಸ್ ಮಂತ್ರಿಮಂಡಳದಲ್ಲಿ ಪೂರ್ತಿಯಾದ ಒಬ್ಬ ಕರ್ನಾಟಕ ಮಂತ್ರಿ ಇಲ್ಲ! (ಇದ್ದವರೊಬ್ಬರು ಅರ್ಧಕನ್ನಡಿಗರು). ಮದ್ರಾಸದ ಮಂತ್ರಿಮಂಡಳದಲ್ಲೂ ಹಾಗೆಯೆ. ಎಂದರೆ ಸರಕಾರದ ನಿತ್ಯಾಲೋಚನೆಗಳಲ್ಲಿ, ಆಡಳಿತೆಯ ಧೋರಣವನ್ನು ನಿಶ್ಚಯಿಸುವಲ್ಲಿ ಕರ್ನಾಟಕದ ಹಿತವನ್ನು ಯಾವಾಗಲೂ ಎತ್ತಿ ಹಿಡಿಯುವವನು ಒಬ್ಬನೂ ಇಲ್ಲ. ಪ್ರಾಂತಗಳು ಈಗಿದ್ದಂತೆ ಉಳಿದರೆ ಈ ಪರಿಸ್ಥಿತಿ ಸುಧಾರಿಸುವ ಭರವಸೆ ಇಲ್ಲ. ಒಂದು ವೇಳೆ ಕಾಂಗ್ರೆಸ್–ಲೀಗಗಳ ಸಮ್ಮಿಶ್ರ ಮಂತ್ರಿಮಂಡಳಗಳು

ಅಸ್ತಿತ್ವದಲ್ಲಿ ಬಂದರೆ, ಕರ್ನಾಟಕಕ್ಕೆ ಪಾರ್ಲಿಮೆಂಟರಿ ಸೆಕ್ರೆಟರಿ ಜಾಗೆಗಳು ಕೂಡ ದೊರೆಯಲಿಕ್ಕಿಲ್ಲ. ಹೀಗೆ ಹೇಳುವುದು ಕನ್ನಡಿಗರಿಗೆ ಕೇವಲ ಹುದ್ದೆಗಳು ಬೇಕೆಂಬ ಅಭಿಪ್ರಾಯವಲ್ಲ; ಆದರೆ ಪ್ರಾಂತದ ಜನರ ಕಷ್ಟ-ನಷ್ಟಗಳ ಪರಿಹಾರಕ್ಕೆ, ಸಂಪದಭಿವೃದ್ಧಿಯ ಚಿಂತನೆಗೆ ಅಧಿಕಾರವು ಕನ್ನಡಿಗನಿಗೆ ಬೇಕು ಎಂದು. ಆದರೆ ಶಾಸನಸಭೆಯಲ್ಲಿಯ ಸದಸ್ಯರ ಸಂಖ್ಯೆಯ ಪ್ರಮಾಣವು ತೀರ ಸಣ್ಣದಿದ್ದುದರಿಂದ, ಮಂತ್ರಿತನದ ಅಧಿಕಾರದಲ್ಲಿ ಭಾಗ ದೊರೆಯುವುದು ಅನ್ಯಾಯವೆನ್ನಿಸಬಹುದು —ಮಿಕ್ಕವರಿಗೆ. ಕನ್ನಡಿಗರು ೧|| ಕೋಟಿ ಜನರಾದರೂ, ಎಲ್ಲ ಕಡೆಯೂ ಅಲ್ಪಸಂಖ್ಯಾಕರಾಗಿರಲು ಕರ್ನಾಟಕವು ವಿಚ್ಛಿನ್ನವಾಗಿದ್ದುದೆ ಕಾರಣ. ಈ ಸ್ಥಿತಿ ಸುಧಾರಿಸಲು ಏಕೀಕರಣ ಒಂದೇ ಒಂದು ಸಾಧನ. ಎಷ್ಟು ಮಂತ್ರಿತನದ ಜಾಗೆಗಳನ್ನು ಇಂದು ಕೊಟ್ಟರೂ, ಏಕೀಕರಣಕ್ಕೆ ಅದು ಸರಿಗಟ್ಟಲಾರದು.

## ಸಂಪದಭಿವೃದ್ಧಿಯ ಮೂಲ

ಇಂದಿನ ಸಂಸ್ಕೃತಿಯಲ್ಲಿ ಯಾವ ಪ್ರದೇಶದ ಸಂಪತ್ತಾದರೂ ಬೆಳೆಯುವುದಾದರೆ, ಅದಕ್ಕೆ ಮುಖ್ಯವಾದ ಕಾರಣಗಳಲ್ಲಿ ಸಾರಿಗೆ (Communications) ಸೌಕರ್ಯವೂ ಒಂದು ಎಂದು ಧೈರ್ಯವಾಗಿ ಹೇಳಬಹುದು. ಈ ದೃಷ್ಟಿಯಿಂದ ನೋಡಿದಲ್ಲಿ ಕನ್ನಡ ಜಿಲ್ಲೆಗಳ ಸ್ಥಿತಿ ಅತ್ಯಂತ ಹೀನಾಯಮಾನವಾಗಿದೆ. ಮುಂಬಯಿ-ಮದ್ರಾಸು ಪ್ರಾಂತಗಳ ಕನ್ನಡ ಜಿಲ್ಲೆಗಳನ್ನು ಒಟ್ಟು ನೋಡಿದರೆ, ರೈಲುದಾರಿ (ಅದೂ ಹೆಚ್ಚಾಗಿ ಚಿಕ್ಕಳತೆಯ— Metre guage ದು) ಯಾವು.

ದಕ್ಷೂ ಸಾಲದ್ದು ಮತ್ತು ಉಪಯೋಗವಿಲ್ಲದ್ದು ಎಂದು ಹೇಳಬಹುದು. ಮೊದಲ ಮಾತೆಂದರೆ ಕನ್ನಡ ಜಿಲ್ಲೆಗಳೊಳಗೆ ಪರಸ್ಪರ ಸಂಪರ್ಕವನ್ನು ಬೆಳೆಯಿಸುವುದು ಈ ದಾರಿಯ ಉದ್ದೇಶವೆ ಆಗಿಲ್ಲ. ಮುಂಬಯಿ ಪ್ರಾಂತದ ಕೆಲವು ಕನ್ನಡ ಸ್ಥಳಗಳನ್ನು ಮುಂಬಯಿ ನಗರಕ್ಕೆ, ಮದ್ರಾಸ ಪ್ರಾಂತದಲ್ಲಿ ಮದ್ರಾಸ ನಗರಕ್ಕೆ ಜೋಡಿಸುವುದೆ ಮುಖ್ಯ ಉದ್ದೇಶ. ಹೀಗಾಗಿ ಕನ್ನಡ ಜಿಲ್ಲೆಗಳಲ್ಲಿಯೆ ಒಂದು ನಗರದಿಂದ ಇನ್ನೊಂದು ನಗರಕ್ಕೆ ನೇರ ದಾರಿ ಇಲ್ಲದ ಸಂಗತಿ ಇದೆ. ರೈಲುದಾರಿಯನ್ನು ಹಾಕುವಾಗ ಕಂಡುಬರುವ ಧೋರಣೆಯೆ ವಾಹನದಾರಿಯ ಯೋಜನೆಯಲ್ಲೂ ಕಂಡುಬರುವುದು ಈ ದಾರಿಯ ಹೆಚ್ಚಿನ ಹೊಣೆಯು ಜಿಲ್ಲಾ ಬೋರ್ಡುಗಳದೆಂಬ ನೆವದಿಂದ ಸರಕಾರವು ಹೆಚ್ಚು ಹಣವನ್ನು ವಿನಿಯೋಗಿಸಿಲ್ಲ. ಜಿಲ್ಲಾ ಬೋರ್ಡುಗಳ ಉತ್ಪನ್ನ ಕ್ಷೇತ್ರವು ತೀರ ಸಂಕುಚಿತವಿದ್ದುದರಿಂದ, ದಾರಿ ಹಾಕುವುದು ಇವುಗಳಿಗೆ ದುಸ್ತರ, ಹಾಕಿದ ದಾರಿಯೂ ವ್ಯಾಪಾರದ ಸರಕುಗಳ ಭಾರವ ಸಾಗಿಗೆಯನ್ನು ತಡೆಯುವಂತಹದಲ್ಲ. ಮುಂಬಯಿ ಪ್ರಾಂತದ ಮಿಕ್ಕ ಭಾಗಗಳೊಡನೆ ಹೋಲಿಸಿದಾಗ, ಕರ್ನಾಟಕ ಭಾಗವು ಈ ವಿಷಯದಲ್ಲಿ ಕಲ್ಪನೆಗೆ ಮೀರಿದ ಅನನುಕೂಲತೆಗೆ ಒಳಗಾಗಿದೆ ಎಂಬುದು ಸ್ಪಷ್ಟವಾಗಿ ಕಂಡುಬರುವುದು.

## ಸಂತಾಪಜನಕ ಸೋಜಿಗ

ಮುಂಬಯಿ ಪ್ರಾಂತದಲ್ಲಿ ಬಯಲುಸೀಮೆಯ ಕನ್ನಡ ಪ್ರದೇಶ, ಮದ್ರಾಸ ಪ್ರಾಂತದಲ್ಲಿ ಬಳ್ಳಾರಿ ಜಿಲ್ಲೆ ಇವೆರಡು ಸಂತತವಾಗಿ ಬರಗಾಲಕ್ಕೆ ಆಹುತಿಯಾಗುವುದನ್ನು ನಾವು

ಕಾಣುತ್ತೇವೆ. ಮಹಾರಾಷ್ಟ್ರದ ಕೆಲವು ಜಿಲ್ಲೆಗಳು ಬರಗಾಲಕ್ಕೆ ಗುರಿಯಾಗುವುವೆಂದು ಕಂಡು ನಿವಾರಣೆಯ ಒಂದು ಉಪಾಯವಾಗಿ ಸರಕಾರವು ತನ್ನ ವೆಚ್ಚದಿಂದ ದಾರಿಯನ್ನು ಹಾಕಿಸಿತಂತೆ. ಆದರೆ ವಿಜಾಪುರ ಜಿಲ್ಲೆಗೆ ಆ ಮಾತು ಅನ್ವಯಿಸಲಿಲ್ಲ. ಅದೂ ಹೋಗಲಿ, ಮದ್ರಾಸ ಕರ್ನಾಟಕದಲ್ಲಿ ತುಂಗಭದ್ರೆ, ಮುಂಬಯಿಯ ಕರ್ನಾಟಕದಲ್ಲಿ ಕೃಷ್ಣಾ ಹರಿಯುತ್ತಿವೆಯಲ್ಲವೆ? ಈ ದೊಡ್ಡ ಪ್ರವಾಹಗಳು ಕನ್ನಡಿಗರ ಕಣ್ಣೀರಿನ ಪ್ರವಾಹವಾಗಿವೆಯಲ್ಲದೆ, ಇವುಗಳ ನೀರಾವರಿ ಯೋಜನೆಯನ್ನು (ಮಹಾರಾಷ್ಟ್ರದಲ್ಲಿ ನೀರಾ ನದಿಗೆ ಮಾಡಿದಂತೆ) ಸರಕಾರವು ಮಾಡಲಿಲ್ಲ. ಪ್ರಜೆಗಳು ನಿತ್ಯದ ಅನ್ನ-ಬಟ್ಟೆಗಾಗಿಯೂ ಚಳವಳವನ್ನು ಹೂಡುವುದೆಂದರೆ ಆಡಳಿತದ ಗೌರವವಲ್ಲ. ಪ್ರಾಂತದಲ್ಲಿ ಉತ್ತಮ ತರಗತಿಯ ಹತ್ತಿ ಮತ್ತು ಧಾನ್ಯಗಳನ್ನು ಬೆಳೆಯುವಂತಹ ನೆಲವಿದ್ದಲ್ಲಿ ಇಂದಿನ ವರೆಗೂ ಎರಡರಿಂದ—ನಾಲ್ಕು ವರ್ಷಗಳಿಗೊಮ್ಮೆ ಬರಗಾಲದ ಪೀಡೆ ತಪ್ಪಬಾರದೆಂದರೆ ಆಡಳಿತವು ಈ ಪ್ರದೇಶಕ್ಕೆ ಅವಶ್ಯ ಲಕ್ಷ್ಯವನ್ನಾಗಲಿ ವೆಚ್ಚವನ್ನಾಗಲಿ ಪೂರಯಿಸಿಲ್ಲ ಎಂದೇ ಹೇಳಬಹುದು.

## ಕರಾವಳಿಯೊ ಕರ-ಹಾವಳಿಯೊ?

ಸಾರಿಗೆಯುತೆಯು ಸಂಪದಭಿವೃದ್ಧಿಗೆ ಇನ್ನೊಂದು ಮಹತ್ತ್ವದ ಕಾರಣವಿದೆ. ಸಾರಿಗೆಯಿಂದ ಪ್ರದೇಶದ ಒಳಗೆ ವ್ಯಾಪಾರದ ಬೆಳವಣಿಗೆಯಾಗುವಂತೆ, ಹೊರಗಿನ ಪ್ರದೇಶಗಳೊಡನೆ ವ್ಯಾಪಾರ ಬೆಳೆಯುವ ಸೌಕರ್ಯವೂ ಧನವಂತಿಕೆಯ ಮೂಲವಾಗುವುದು. ಆದರೆ ಒಂದು ವಿಶೇಷ:

ಸಾರಿಗೆಯ ಸೌಕರ್ಯ ಮನುಷ್ಯಪ್ರಯತ್ನಕ್ಕೆ ಸಾಧ್ಯ-ವಾದುದು; ಆದರೆ ಪರದೇಶಗಳೊಡನೆ ವ್ಯಾಪಾರ ಮಾಡುವ ಸೌಕರ್ಯ ನಿಸರ್ಗದ ಅಧೀನದಲ್ಲಿದೆ. ಕರ್ನಾಟಕಕ್ಕೆ ಈ ದೃಷ್ಟಿಯಲ್ಲಿ ನಿಸರ್ಗವು (ಮನುಷ್ಯನಿಗಿಂತಲೂ) ಹೆಚ್ಚು ಅನುಕೂಲ ಮತ್ತು ಸಹಾಯಕಾರಕವಾಗಿದೆ. ಕರ್ನಾಟಕದ ಪಶ್ಚಿಮದಲ್ಲಿ ೩೦೦ ಮೈಲಿಗಳ ಸಂತತವಾದ ಕರಾವಳಿ ಇದೆ. ಈ ಕರಾವಳಿಯಲ್ಲಿ ಬಂದರಗಳನ್ನು ಮಾಡಿಕೊಂಡು ಕನ್ನಡಿ-ಗರು ಹಿಂದಿನ ಕಾಲದಲ್ಲೂ ಪರದೇಶಗಳೊಡನೆ ವ್ಯಾಪಾರ ವನ್ನು ಸಾಗಿಸುತ್ತಿದ್ದರು. 'ಹಿಂದಿನ ಕಾಲದಲ್ಲೂ' ಎನ್ನು ವುದಕ್ಕಿಂತ 'ಹಿಂದಿನ ಕಾಲದಲ್ಲಿಯೆ' ಎನ್ನುವುದು ಹೆಚ್ಚು ಸಮರ್ಪಕವಾದೀತು. ಯಾಕೆಂದರೆ, ಇಂದಿನ ಕಾಲದಲ್ಲಿ ಈ ಕರಾವಳಿಯಲ್ಲಿ ಕರ್ನಾಟಕದ ಒಳದೇಶವನ್ನು ಈ ಕರಾವಳಿಗೆ ಜೋಡಿಸುವ ಸಾರಿಗೆಯ ಸೌಕರ್ಯವೂ ಇಲ್ಲ. ಮುಂಬಯಿ ಪ್ರಾಂತದ ದೃಷ್ಟಾಂತದಿಂದ ಒಂದು ಮಾತನ್ನು ಹೇಳಬಹು-ದಾಗಿದೆ. ಈ ಪ್ರಾಂತಕ್ಕೆ ಉದ್ಯೋಗಗಳ ಮತ್ತು ವ್ಯಾಪಾ-ರದ ಕೇಂದ್ರವೆಲ್ಲ ಮುಂಬಯಿಯ ಸುತ್ತುಮುತ್ತಲಿನಲ್ಲಿಯೆ ಇದೆ; ಆದುದರಿಂದ ಮುಂಬಯಿ ಬಂದರ ಬೆಳೆದಿದೆ, ಬೆಳೆಯಿ-ಸುವುದು ಇಷ್ಟವೂ ಇದೆ. ಕರ್ನಾಟಕದಲ್ಲಿ ಉದ್ಯೋಗವೂ ಇಲ್ಲ, ವ್ಯಾಪಾರವೂ ಇಲ್ಲ; ಆದುದರಿಂದ ಬಂದರಗಳನ್ನು ಕಟ್ಟಿಸುವ ವೆಚ್ಚ ಯಾಕೆ? ಕನ್ನಡಿಗರು ಮುಂಬಯಿ ಬಂದರ-ಕ್ಕಾಗಿಯೆ ಕರ ಕೊಡುವಂತಾದರೆ ತಪ್ಪೇನು?

## ಬೊಟ್ಟು ಶಿವಿದು ಕಣ್ಣೀರು ಯಾಕೆ ಎಂದಂತೆ

ಮೇಲಿನ ಮಾತು ಎಷ್ಟು ಮೋಜಿನದಾಗಿದೆಯೊ ಅಷ್ಟೆ

ಮನಸ್ತಾಪವನ್ನೂ ಉಂಟುಮಾಡುವಂತಹದಾಗಿದೆ. ಯಾಕೆಂದರೆ, ಉದ್ಯೋಗ-ವ್ಯಾಪಾರಗಳಿಲ್ಲ, ಅದಕಾಗಿ ಬಂದರಗಳ ಆವಶ್ಯಕತೆ ಇಲ್ಲ ಎನ್ನುವುದು ಎಷ್ಟು ತೋರಿಕೆಗೆ ಸತ್ಯವೆನ್ನಿಸುವುದೊ ಅಷ್ಟೆ ಬಂದರಗಳೂ ಸಾರಿಗೆಯ ಸೌಕರ್ಯವೂ ಇದ್ದರೆ ಉದ್ಯೋಗ-ವ್ಯಾಪಾರಗಳು ಬೆಳೆಯುವುವು ಎಂಬುದು ನಿಜವಾದ ಸತ್ಯವಾಗಿದೆ. ಕನ್ನಡ ಜಿಲ್ಲೆಗಳ ವಿಷಯದಲ್ಲಂತೂ ಈ ಮಾತಿನ ಸತ್ಯತೆ ನಿರ್ವಿವಾದವಾಗಿದೆ. ಯಾಕೆಂದರೆ, ಉದ್ಯೋಗಗಳಿಗೆ ಆವಶ್ಯವಿದ್ದ ಕಚ್ಚಾಮಾಲು ಕನ್ನಡ ಜಿಲ್ಲೆಗಳಲ್ಲಿ ಹೇರಳವಾಗಿ ದೊರೆಯುವುದು. ಹತ್ತಿ, ಅರಣ್ಯ-ಸಂಪತ್ತು, ಕಣಿಗಳು, ಖನಿಜಗಳು—ಇವುಗಳು ಕನ್ನಡ ಜಿಲ್ಲೆಗಳಲ್ಲಿದ್ದಷ್ಟು ಮುಂಬಯಿ-ಮದ್ರಾಸ್ ಪ್ರಾಂತಗಳ ಬೇರೆ ಯಾವ ಭಾಗಗಳಲ್ಲೂ ಇಲ್ಲ. ಆದರೆ ಇದರ ಲಾಭವನ್ನು ಪಡೆಯಲು ಸದ್ಯಕ್ಕೆ ಯಾವ ಅನುಕೂಲವೂ ಇಲ್ಲ. ಯಾವ ಉದ್ಯೋಗವನ್ನು ಸ್ಥಾಪಿಸಿದರೂ ಉತ್ಪನ್ನವಾದ ಸರಕುಗಳನ್ನು ಶೀಘ್ರವಾಗಿ ವ್ಯಾಪಾರದಲ್ಲಿ ಹರಡಿಸಲು ಸಾರಿಗೆಯ ಸೌಕರ್ಯ ಮುಖ್ಯ. ಶೀಘ್ರವಿದ್ದಷ್ಟೆ ಮಿತವ್ಯಯದ್ದೂ ಇರ-ಬೇಕಾಗುವುದು, ಇಲ್ಲವಾದರೆ ಜನತೆಗೆ ಶಕ್ಯವಾದ ಮತ್ತು ಆಕರ್ಷಕವಾದ ಬೆಲೆಗೆ ಆ ಸರಕುಗಳನ್ನು ಮಾರುವುದು ಕಠಿಣವಾಗಿ, ಉದ್ಯೋಗವೆ ಹಾನಿಗೀಡಾಗಬಹುದು. ಆದರೆ ಇದುವರೆಗೆ ಹೇಳಿದಂತೆ ಕನ್ನಡ ಜಿಲ್ಲೆಗಳಲ್ಲಿ ಸಾರಿಗೆಯ ಸೌಕರ್ಯವೆ ಇಲ್ಲ. ಇದ್ದಷ್ಟು ಸೌಕರ್ಯ ಇಳುಕಲಾಗಿದೆ ಎನ್ನಬಹುದು; ಎಂದರೆ ಹೊರಗಿನ ಸರಕುಗಳು ನಮ್ಮಲ್ಲಿ ಜಾರುತ್ತ ಬರುವುವು, ನಮ್ಮ ಸರಕುಗಳು ಹೊರಗೆ ಹೋಗು-ವುವಾದರೆ ಏರುತ್ತ ಹೋಗಬೇಕಾಗುವುದು. ತೋರಿಕೆಗೆ

ಸತ್ಯದಂತಿದ್ದ ಕಾರಣವನ್ನು ಕೊಟ್ಟು ನಮ್ಮ ಬೊಟ್ಟನ್ನೆ ನಮ್ಮ ಕಣ್ಣಲ್ಲಿ ತಿವಿಯುವ ಜಾಣತನವಲ್ಲದೆ ಬೇರೆ ಯಾವ ಭಾವನೆಯೂ ಅಡಳಿತದಲ್ಲಿ ಕಾಣದು.

## ಆರ್ಥಿಕ ಬಲ

ಮೇಲಿನ ಚರ್ಚೆಯಲ್ಲಿ ಇನ್ನೊಂದು ಸಂಶಯದ ಉತ್ತರವೂ ಅಡಕವಾಗಿದೆ. ಅದೆಂದರೆ, ಕನ್ನಡ ಜಿಲ್ಲೆಗಳನ್ನು ಪ್ರತ್ಯೇಕವಾದ ಪ್ರಾಂತವನ್ನಾಗಿ ಮಾಡುವುದು ಪ್ರಾರಂಭದಲ್ಲೂ ವೆಚ್ಚದ ವಿಷಯವಲ್ಲದೆ, ವರುಷ-ವರುಷಕ್ಕೂ ಹೆಚ್ಚಿನ ವೆಚ್ಚ ತಗುಲುವಂತಹದು. ಕನ್ನಡ ಜಿಲ್ಲೆಗಳ ಆರ್ಥಿಕ ಶಕ್ತಿ, ಉತ್ಪನ್ನದ ಮಿತಿ ಈ ವೆಚ್ಚವನ್ನು ತಡೆಯಬಹುದೆ ಎಂದು. ಕನ್ನಡ ಜಿಲ್ಲೆಗಳು ಎಷ್ಟು ಸುಸಮೃದ್ಧವಾದುವೆಂಬುದನ್ನು ಹಿಂದೆ ಸೂಚಿಸಿದೆ. ಇಂತಹ ಸುಸಮೃದ್ಧ ಪ್ರದೇಶವು ಪ್ರತ್ಯೇಕ ಪ್ರಾಂತವಾಗದಷ್ಟು ಆರ್ಥಿಕವಾಗಿ ಬಡವವಾಗಿದ್ದರೆ ಆ ಮಾತು ಏಕೀಕರಣದ ಅಗತ್ಯವನ್ನೆ ಸೂಚಿಸುವುದೆಂದು ನಮ್ಮ ಅಭಿಪ್ರಾಯ. ಸಮೃದ್ಧ ಪ್ರದೇಶವು ಕ್ರಮೇಣ ಬಡವಾಗುವುದು ಸದ್ಯದ ಸ್ಥಿತಿಗೆ ಪೋಷಕವೆನ್ನಿಸುವುದಿಲ್ಲ, ಹೀಗೆಯೆ ಕರ್ನಾಟಕವು ವಿಚ್ಛಿನ್ನವಾಗಿ ಉಳಿದರೆ ಬಡತನ ಹೆಚ್ಚಬಹುದೆಂದೇ ಹಿಂದಿನ ಅನುಭವದಿಂದ ಹೇಳಬೇಕಾಗುವುದು. ಆದರೆ ಇಂತಹ ವಾದವು ಔಪಚಾರಿಕವೆ ಆಗಿದೆಯಲ್ಲದೆ, ವಾಸ್ತವಿಕವಾಗಿಲ್ಲ. ಬ್ರಿಟಿಶ್ ಕರ್ನಾಟಕದ ಜಿಲ್ಲೆಗಳನ್ನೆ ಲಕ್ಷ್ಯದಲ್ಲಿಟ್ಟುಕೊಂಡರೂ ಈ ಜಿಲ್ಲೆಗಳ ಉತ್ಪನ್ನ (ಇದರಲ್ಲಿ ಎಷ್ಟೊ ಈ ಜಿಲ್ಲೆಗಳ ಹಿತಕ್ಕಲ್ಲ) ೨೧೦ ಲಕ್ಷದಷ್ಟಿದೆ. ಎಂದರೆ ೪೭ ಲಕ್ಷದಷ್ಟು ಉಳಿತಾಯವನ್ನು

ಕರ್ನಾಟಕ ಪ್ರಾಂತವು ತೋರಿಸುವುದು. ಪ್ರತ್ಯೇಕ ಪ್ರಾಂತವಾಗುವಾಗ ಅವಶ್ಯವಿದ್ದ ಸೆಕ್ರೆಟರಿಯೇಟ್, ಹೈಕೋರ್ಟು, ವಿಶ್ವವಿದ್ಯಾಲಯ — ಮುಂತಾದ ಎಲ್ಲವುಗಳನ್ನೂ ಸ್ಥಾಪಿಸಿಕೊಳ್ಳಲು ಸಾಕಷ್ಟು ಉಳಿತಾಯವಿದೆ. ಯುದ್ಧದ ಮುಂಚಿನ ಕಾಲದಲ್ಲಿ ಹೊಸ ಪ್ರಾಂತದ ಮುಖ್ಯ ಸ್ಥಾನಗಳ (Headquarters) ನಿರ್ಮಾಣಕ್ಕೆ ೯ ಲಕ್ಷ ವೆಚ್ಚ ತಗುಲುವುದೆಂದು ಅಂದಾಜಿದ್ದಿತು. ಈಗ ಅದರ ಎರಡರಷ್ಟನ್ನು ಲೆಕ್ಕಕ್ಕೆ ಹಿಡಿದರೂ, ಕರ್ನಾಟಕ ಪ್ರಾಂತದ ಉಳಿತಾಯವು ಇದೆಲ್ಲಕ್ಕೆ ಸಾಲುವಷ್ಟಿದೆ.

## ಬೆಳವಣಿಗೆ

ಈ ಸಂದರ್ಭದಲ್ಲಿ ಒಂದು ಮಾತನ್ನು ನಾವು—ಕನ್ನಡಿಗರು—ವಿಶೇಷವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಒಂದು ಕಡೆ ಈಗಿದ್ದ ಕರ್ನಾಟಕದ ಬಡತನ, ಇನ್ನೊಂದೆಡೆ ನಮ್ಮ ಪ್ರಾಂತದ ನಿಧಿ—ಸಮೃದ್ಧತೆ—ಇವುಗಳಿರುವಾಗ, ಮೇಲಿನ ಅಂಕಿಗಳು ಉಸುಕಿನಲ್ಲಿ ಬರೆದಂತಹಗಳೆ. ಪ್ರಾಂತದ ಜೀವನಕ್ಕೆ ಆವಶ್ಯಕವಾದ ಅನೇಕ ಯೋಜನೆಗಳನ್ನು ಕೈಕೊಳ್ಳಬೇಕಾಗುವುದು. ಭಾರತದ ಮಿಕ್ಕ ಪ್ರಾಂತೀಯ ಸರಕಾರಗಳೂ ತಂತಮ್ಮ ಪ್ರಾಂತಗಳಲ್ಲಿ ಕೋಟ್ಯವಧಿ ವೆಚ್ಚದ ಯೋಜನೆಗಳನ್ನು ಕೈಕೊಳ್ಳಲಿವೆ. ಪ್ರಾಂತಗಳಿಗೆ ಅದು ಶಕ್ಯವಾಗುವುದಾದರೆ ಕರ್ನಾಟಕ ಪ್ರಾಂತಕ್ಕೆ ಇನ್ನಿಷ್ಟು ಸುಲಭವಾಗಿ ಶಕ್ಯವಾಗಬಹುದು. ಯಾಕೆಂದರೆ ಕರ್ನಾಟಕವು ಬಂದರ, ರೈಲುದಾರಿ, ರಸ್ತೆ, ನೀರಾವರಿ, ಉದ್ಯೋಗ ಕಾರಖಾನೆಗಳು—ಮುಂತಾದುವುಗಳಿಗೆ ಅನುಕೂಲವಾಗುವಂತೆ ನಿಧಿ-

ಸಮೃದ್ಧವಾಗಿದೆ. ಇನ್ನೂ ಒಂದು ಮಾತು. ಇಪ್ಪತ್ತನೆಯ ಶತಮಾನದಲ್ಲಿ ನಮ್ಮ ಪ್ರಾಂತವನ್ನು ರಚಿಸಿಕೊಳ್ಳುವ ಸಂದರ್ಭವು ಅತ್ಯಂತ ಸ್ಪೃಹಣೀಯವಾದ ಸುಯೋಗ ಎಂದು ನಾವು ತಿಳಿಯತಕ್ಕದ್ದು. ಯಂತ್ರಯುಗ, ವಿಜ್ಞಾನದ ಪ್ರಗತಿ, ಆರೋಗ್ಯಶಾಸ್ತ್ರ—ಇವೆಲ್ಲವುಗಳ ಪೂರ್ತಿ ಲಾಭವನ್ನು ನಾವು ಪಡೆದುಕೊಳ್ಳಬೇಕು. ಇದಲ್ಲದೆ ಹೊಸ ಪ್ರಾಂತ ರಚನೆಯಲ್ಲಿ ಸದ್ಯದ ಅನನುಕೂಲತೆಗಳ ನಿವಾರಣೆಯಂತೆ ಅವುಗಳ ಪುನರಾವೃತ್ತಿಯಾಗದಂತೆ ನೋಡುವುದೂ ನಮ್ಮ ಕರ್ತವ್ಯವಾಗಿದೆ. ಹೊಸ ಪ್ರಾಂತವೆಂಬ ಮಾತ್ರಕ್ಕೆ ಒಬ್ಬ ಗವರ್ನರ್, ೮–೧೦ ಮಂತ್ರಿಗಳು ಇರಲೇಬೇಕೆಂಬ ನಿಯಮವಿಲ್ಲ. ಹಿಂದಿನ ಕಾಲದಂತೆ ಚೀಫ್ ಕಮೀಶನರಂತಹ ಕಡಮೆ ಸಂಬಳದ ಹಿರಿಯಧಿಕಾರಿ, ಕಾಂಗ್ರೆಸ್ ಮಂತ್ರಿಮಂಡಳದಂತೆ ತೀರ ಕಡಿಮೆ ಸಂಬಳ ತೆಗೆದುಕೊಳ್ಳದೆ ಸಂಖ್ಯೆಯಿಂದ ಸಣ್ಣದಾದ ಮಂತ್ರಿಮಂಡಳ—ಈ ರೀತಿ ಮೇಲಿನಿಂದಲೆ ವೆಚ್ಚವನ್ನು ಕಡಮೆ ಮಾಡುತ್ತ ಹೋಗಬಹುದು. ಅದರಂತೆಯೆ ಒಂದು ಪ್ರಾಂತವೆಂಬ ಮಾತ್ರಕ್ಕೆ ಒಂದೇ ವಿಶ್ವವಿದ್ಯಾಲಯ (ಅನೇಕರಿಗೆ ಸಮೀಪದ ಸಂಬಂಧ ಬಾರದು ಹೀಗಿದ್ದರೆ), ಶಿಕ್ಷಣವೆಂದರೆ ಸಾಕ್ಷರತೆ ಎಂದು ಹಟ ಹಿಡಿಯದೆ ಬೇರೆ ಬೇರೆ ತರದ, ಎಲ್ಲ ಜಿಲ್ಲೆಯವರಿಗೂ ಅನುಕೂಲವಾಗುವಂತೆ ಶಿಕ್ಷಣದ ಏರ್ಪಾಡನ್ನು ಮಾಡಬಹುದು.

## ಕೊನೆಯ ಮಾತು

ಕೊನೆಯದಾಗಿ ಒಂದು ವಿಷಯ: ಹೊಸ ಪ್ರಾಂತದ ನಿರ್ಮಾಣವಾದಲ್ಲಿ ಅನೇಕ ಯೋಜನೆಗಳಿಗೆ ಅವಶ್ಯವಾದ

ತಜ್ಞರ ಕೊರತೆಯುಂಟಾಗುವುದು ಎಂದೂ ಕೆಲವರು ವಾದಿಸುವುದುಂಟು. ಆದರೆ ಸಿಂಧ-ಓರಿಸಾ ಪ್ರಾಂತಗಳ ಪರಿಸ್ಥಿತಿ ಏನೇ ಇದ್ದಿರಲಿ, ಕರ್ನಾಟಕಕ್ಕೆ ಮಾತ್ರ ಈ ಮಾತು ತುಸುಮಟ್ಟಿಗೂ ಅನ್ವಯಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ಯಾಕೆಂದರೆ, ಕೇಂದ್ರ ಮತ್ತು ಮುಂಬಯಿ ಮದ್ರಾಸ್ ಪ್ರಾಂತಗಳ ಸರಕಾರಗಳ ಅಧೀನದಲ್ಲಿ ಯೋಗ್ಯತೆಯ ಮತ್ತು ಹೊಣೆಗಾರಿಕೆಯ ಕನ್ನಡ ಮೇಲಾಧಿಕಾರಿಗಳಿದ್ದಾರೆ ಇಷ್ಟೆ ಅಲ್ಲ. ಎಂಜಿನಿಯರಿಂಗ, ಅಗ್ರಿಕಲ್ಚರ್, ಫೈನಾನ್ಸ್, ಸಿವ್ಹಿಲ್ ಸರ್ವಿಸ್, ಪೋಸ್ಟ ಮತ್ತು ರೇಲ್ವೆ, ಫಾರೆಸ್ಟ್, ಶಿಕ್ಷಣ, ಅರ್ಥಶಾಸ್ತ್ರ—ಮೊದ-ಲಾದ ಅನೇಕ ಉಪಯುಕ್ತ ಶಾಖೆಗಳಲ್ಲಿಯೆ ಅನುಭವಿಕ-ರಾದ, ತಜ್ಞರೆನ್ನಿಸಿಕೊಂಡ ಕನ್ನಡ ಮೇಲಧಿಕಾರಿಗಳಿದ್ದಾರೆ; ಹೈಕೋರ್ಟಿನ ನ್ಯಾಯಾಧೀಶರಿದ್ದಾರೆ, ಪೋಲೀಸ್ ಮೇಲಧಿಕಾರಿಗಳಿದ್ದಾರೆ. ಇಂದಿನ ಸರಕಾರಗಳ ಆಡಳಿತದಲ್ಲಿ ಇವರಿಂದ ಕರ್ನಾಟಕಕ್ಕೆ ಆಗದ ಲಾಭವನ್ನು ತುಂಬಿಕೊಳ್ಳುವುದಕ್ಕಾದರೂ ಆಯಾ ಸರಕಾರಗಳು ಅವರನ್ನು ಕರ್ನಾಟಕ ಪ್ರಾಂತಕ್ಕೆ ಸ್ಥಳಾಂತರಿಸಲು ಒಪ್ಪಬೇಕು. ತಜ್ಞ ಆಡಳಿತಗಾರರಿಗೆ ಎಷ್ಟು ಕೊಟ್ಟರೂ ಅದು ವೆಚ್ಚವೆನ್ನಿಸದು: ಅದರ ಹತ್ತರಷ್ಟು ಫಲದಾಯಕಗಳಾದ ಯೋಜನೆಗಳನ್ನು ಕರ್ನಾಟಕವು ಪಡೆಯಬಹುದು. ನಿಜವಾಗಿ ನೋಡಿದರೆ ವಿಚ್ಛಿನ್ನ ಕರ್ನಾಟಕಕ್ಕಾಗುವ ಅನನುಕೂಲತೆ—ಅನ್ಯಾಯಗಳನ್ನು ಪರಿಪಡಿಸಿಕೊಳ್ಳುವುದು ಕನ್ನಡಿಗರ ಮೂಲಭೂತ ಹಕ್ಕು. ಕರ್ನಾಟಕವು ಏಕೀಕೃತವಾಗುವುದರಿಂದ ಭಾರತಕ್ಕೂ ಹಿತಶಕ್ತಿಗಳ ಸಂವರ್ಧನ. ಹೀಗಿರು

ವಾಗ ವೆಚ್ಚವಾಗಲಿ, ಶುಷ್ಕತರ್ಕವಾಗಲಿ, ಸದ್ಯದ ಆಡಳಿತದ ಅನುಕೂಲವಾಗಲಿ ನಮ್ಮನ್ನು ಹೆದರಿಸಲಾರದು. ಕರ್ನಾಟಕವು ಉಳಿಯುವುದಾದರೆ ಏಕೀಕರಣ ಒಂದೇ ಒಂದು ಉಪಾಯ; ಏಕೀಕರಣದ ಅಗತ್ಯ ಇಲ್ಲವೆ ಅವಸರ ಇಲ್ಲವೆನ್ನುವುದೆಂದರೆ ಕರ್ನಾಟಕವು ಅಳಿಯುವುದೆ ಯೋಗ್ಯ ಎಂದಂತೆ.

‘ಜಯಂತಿ’ [illegible] ಮುದ್ರಣ.

ಪ್ರಕಾಶಕರು:
ಎಂ. ವಿ. ಮೆಳ್ಳಿಗಟ್ಟಿ
'ಜಯಂತಿ' ಕಾರ್ಯಾಲಯ
ಧಾರವಾಡ

(ಎಲ್ಲ ಅಧಿಕಾರವೂ ಬರೆದವರ ಅಧೀನದಲ್ಲಿದೆ.)

೧೯೪೫

ಮುದ್ರಕರು:
ಎನ್. ಎಸ್. ಬೆಂಗೇರಿ
'ವಿಜಯ' ಮುದ್ರಾಲಯ
ಧಾರವಾಡ

# ಜಯಂತಿ ಪ್ರಚಾರಮಾಲೆ

ಜಯಂತಿ ಪ್ರಕಾಶನ ಸಮಿತಿಯ ಹೊಸದೊಂದು ಯೋಜನೆಯಿದು. ಈ ಮಾಲೆಯಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳನ್ನು ಗುರಿಯಾಗಿರಿಸಿ ಕೊಂಡು ಬರೆದ ಪುಟ್ಟಪುಟ್ಟ ಹೊತ್ತಗೆಗಳನ್ನು ಆಗಾಗ ಹೊರಡಿಸಬೇಕೆಂದಿದ್ದೇವೆ. ಆ ಆ ವಿಷಯಗಳಲ್ಲಿ ಅರಿತು ನುರಿತವರಿಂದ ಹೊತ್ತಗೆಗಳನ್ನು ಬರೆಯಿಸಲಾಗುವುದು. 'ಜಯಂತಿ' ಪತ್ರಿಕೆಯಂತೆಯೆ ಈ ಪ್ರಚಾರಮಾಲೆಯೂ ಜನಾದರಕ್ಕೆ ಪಾತ್ರವಾಗುವುದೆಂದು ನಮ್ಮ ನಂಬುಗೆ.

ಸದ್ಯ ನಮ್ಮ ನಾಡಿನ ಜನತೆಯ ಸಂಘಟನೆಯನ್ನು ತೀರ ಹದಗೆಡಿಸಿರುವ ಗೆದ್ದಲುಹುಳುವಾದ ನಾಡಿನ 'ಏಕೀಕರಣ'ದ ಸಮಸ್ಯೆಯ ವಿವೇಚನೆಯನ್ನು 'ಚಾಡಿಯ ಚಾಣಕ್ಯ'ರು ವಿವರವಾಗಿ ಮಾಡಿರುವರು. ಇದನ್ನೋದಿ ಮನನಮಾಡಿದ ಯಾರೂ ನಮ್ಮ ನಾಡಿನ ಏಕೀಕರಣದ ಆವಶ್ಯಕತೆಯನ್ನು ಕೂಲಂಕಷವಾಗಿ ಅರಿತು ಅದಕ್ಕಾಗಿ ಜಾಗೃತರಾಗಬಹುದಾಗಿದೆ.

ಪ್ರಚಾರಮಾಲೆಯ ಉದ್ದೇಶ ಪ್ರಚಾರವೇ ಆದುದರಿಂದ, ಹೊತ್ತಗೆಗಳ ಅಚ್ಚಿನ ವೆಚ್ಚವಷ್ಟು ನಮಗೆ ದೊರೆತರೆ ಸಾಕು. ಎಂತಲೆ ಇಂದಿನ ಕಾಗದ-ಮುದ್ರಣಗಳ ಏರುದರದಲ್ಲಿಯೂ ಪುಸ್ತಕಗಳ ಬೆಲೆಯನ್ನು ತಗ್ಗಿಸಿಯೆ ಇರಿಸಲಾಗಿದೆ. ಪ್ರಚಾರಮಾಲೆಯಿಂದ ಸಮಾಜದ ತಿಳಿವಳಿಕೆಗೆ ನೆರವು ದೊರೆಯಲೆಂದು ನನ್ನ ಹೃದಯದ ಹಾರಯಿಕೆ.

**ಬೆಟಗೇರಿ ಕೃಷ್ಣಶರ್ಮ**